

## POOJYA APPAJI'S VISION

By the blessings of Poojya Dr. Appaji, the Godutai Degree College of Arts and Commerce for women was started in the year 1973 with the objective of empowering women through value based education. It was inspired by the life and teaching of Godutai and guided by Dr. Appaji's vision. It provides a comprehensive education in arts and commerce degree courses. It is the most cherished dream of Appaji that our girl students should be spiritually guided, intellectually stimulated, and morally upright and socially committed. Then we can dream of building an ideal society and the nation. Appaji believes that the higher education does not mean mere acquisition of degrees, it is beyond. We foster traditional values and culture, which should enable them to face challenges in life.

EDUCATION PHILOSOPHY:

"Teaching and Learning not only for the sake of livelihood but also for the welfare others, thinking that serving humanity is serving god, is **Kayaka Dasoha Philosophy of Education**"

**Poojya Dr. Sharnbaswappa Appaji**

8th Peethadhipati, Sharnbasveshwar Samsthana
President Sharnbasveshwar Vidhya Vardhak Sangha
Chancellor, Sharanabasava University

## FROM THE DESK OF CHIEF EDITOR

Man's inquisitive instinct could not leave him silent. His mind set him towards exploring, inventing and discovering the unknown, known and findings in different fields of research like Art, Literature, Science and Technology which further resulted in remarkable increasing growth and development of research activities. In this regard, our faculty members have been incessantly contributing in the field of research by writing research articles under the stewardship and guidance of Poojya Dr. Sharnbaswappa Appaji. In consequence with, they have been writing research articles related to their subjects, fields and publishing them. I wish that these research articles would be a source of resource for the future research scholars.

**PRINCIPAL AND CHIEF EDITOR**



Fax No: 08472,273556 Contact No: 08472-220835
Email id: principal@godutaidegree.org | www.godutaidegree.org

# EDITORIAL BOARD

Dr. Neelambika Sherikar
Editor-In-Chief

Smt. Shridevi Harawal
Executive Editor & Publisher

Dr. Siddamma Guded
-Review Editor-

Dr. Seema Patil
-Assistant Editor-

Dr. N S Patil
-Editor-


ISSN 2454-7255 VOL 5|ISSUE 2|Mar-2015


| INTERNAL ADVISORY BOARD | |
|---|---|
| 1. Prof. C S Ugaji<br>Registrar, Sharanabasaveshwar Vidya Vardhaka Sangha, Kalaburagi | 4. Dr. S G Dollegoudar<br>Principal, Sharanabasaveshwar College of Arts, Kalaburagi. |
| 2. Dr. V D Mythri<br>APPA Institute of Engineering & Technology, Kalaburagi | 5. Dr. S Honnalli<br>Director, Doddappa Appa Institute of MBA Kalaburagi. |
| 3. Dr. Anilkumar Bidve<br>Dean, APPA Institute of Engineering & Technology, Kalaburagi | 6. Dr. Harish S B<br>Associate Professor, APPA Engineering College, Kalaburagi. |

**Shodha**
## International Recognition Multi disciplinary Research Journal

## CONTENTS

ISSN 2454-7255 VOL 5|ISSUE 2|Mar-2015


| SL NO | Title & Name of the Author (S) | Page No |
|---|---|---|
| 1. | ಶರಣಬಸವರು ಮತ್ತು ಆಧ್ಯಾತ್ಮ<br>Dr. Neelambika Policepatil (Sherikar) | 5 |
| 2. | Gangamma and Sankavve<br>Smt, Shridevi S. Harwal | 12 |
| 3. | Art and Expression<br>Smt, Shantala B Appa | 15 |
| 4. | ಗಣಕಯಂತ್ರ ಮತ್ತು ಅಂತರ್ಜಾಲ<br>ಶ್ರೀಮತಿ ಶಶಿಕಲಾ ಪುರವಂತ | 18 |
| 5. | ಬಹಮನಿ ಸುಲ್ತಾನರ ಕಾಲದ ಕಲಬುರಗಿಯ ಪ್ರಮುಖ ಸ್ಮಾರಕಗಳು<br>ಪ್ರೊ. ಸುರೇಶಕುಮಾರ ನಂದಗಾಂವ | 27 |
| 6. | ಸಂಗೀತ ಮತ್ತು ಮನಸ್ಸು<br>ಡಾ॥ ಸೀಮಾ ಪಾಟೀಲ | 30 |
| 7. | Indian Women Athletes from South India<br>Smt.Janaki.Hosur | 33 |
| 8. | MGNREGS's SOCIAL AUDIT: A Case Study of Karnataka<br>Dr. (Smt) Siddamma R Guded | 38 |
| 9. | The Importance of English in India<br>Prof Renuka S | 46 |
| 10. | ಗದುಗಿನ ವೀರೇಶ್ವರ ಪುಣ್ಯಾಶ್ರಮ<br>ಪ್ರೊ॥ ರೇವಯ್ಯಾ ವಸ್ತ್ರದ ಮಠ | 50 |
| 11. | The importance of Orality and Textuality<br>Smt.Savitri S.Jambaldinni | 52 |
| 12. | ಶರಣೆ ಸತ್ಯಕ್ಕಳ ಸತ್ಯನಿಷ್ಠೆ<br>ಶ್ರೀಮತಿ ಪುಟ್ಟಮಣಿ ದೇವಿದಾಸ | 56 |
| 13. | Agricultural crisis in India<br>Mr. Siddalingareddy | 59 |
| 14. | ಶರಣಬಸವೇಶ್ವರ ಮಹಾಪೀಠಕ್ಕೆ ದರ್ಶನಗೈದ ರಾಜಕೀಯ ಮುತ್ಸದ್ದಿ ವೀರಶೈವ ನಾಯಕರು<br>Prof. N.S Hugar | 71 |

| | | |
|---|---|---|
| 15. | ಬಸವಣ್ಣನವರ ಕಾಲ ಮತ್ತು ವಂಶ ಕುರಿತು ಒಂದು ಐತಿಹಾಸಿಕ ಸಮೀಕ್ಷೆ<br>Prof. Malappa K. Bothogi | 79 |
| 16. | ಕರ್ನಾಟಕದಲ್ಲಿ 'ರಂಗ ಸಂಗೀತದ ಮೂಲಕ ಹಿಂದೂಸ್ಥಾನಿ ಸಂಗೀತ'<br>ಲಕ್ಷ್ಮೀಶಂಕರ ಜೋಶಿ, | 82 |


**ISSN 2454-7255** **Original Article** **VOL 5|ISSUE 2|Mar-2015**

Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org



# ಶರಣಬಸವರು ಮತ್ತು ಆಧ್ಯಾತ್ಮ

**Dr. Neelambika Policepatil (Sherikar)**
Principal, Godutai Doddappa Appa Arts & Commerce, Degree College for Women
Kalaburagi-585103

***ಪೀಠಿಕೆ:-***

*ಮಹಾದಾಸೋಹಿ ಶರಣಬಸವೇಶ್ವರರು ಧರ್ಮನಿಷ್ಠರು, ಆಧ್ಯಾತ್ಮವಾದಿಗಳು ಬದುಕಿನ ಕೊನೆಯವರೆಗೂ ತನ್ನ ಧರ್ಮನಿಷ್ಠೆಗೆ ಚ್ಯುತಿ ತಂದುಕೊಂಡವರಲ್ಲ. ತನು,ಮನ,ಧನಗಳನ್ನು ಗುರು-ಲಿಂಗ-ಜಂಗಮರ ಸೇವೆಗಿಟ್ಟು ತ್ರಿಮಲಗಳನ್ನು ತೊಳೆದು ಅರಿಷಡ್ವರ್ಗಗಳನ್ನು ಅಳಿಸಿಕೊಂಡು ನಿರಹಂಭಾವದಿಂದ ಗುರು ಕಾರುಣ್ಯ ಪಡೆದು ದಾಸೋಹ ಸಂಪನ್ನರಾದ ಶರಣಬಸವರ ಕಾಯ ಪವಿತ್ರ ಅವರ ಕ್ಷೇತ್ರ ಅವಿಮುಕ್ತ ಕ್ಷೇತ್ರ ಶಿವ ಸ್ವರೂಪಿ, ಶಿವಕ್ರಿಯೆ, ಶಿವಜ್ಞಾನ ಭರಿತರಾಗಿದ್ದ ಶರಣರು ಮಹಾ ಯೋಗಿಗಳು. ಮಹಾಜ್ಞಾನಿಗಳು ಅಷ್ಟೇ ಅಲ್ಲ ಜನಪದರಿಗೆ ಅವರು ದೇವರಿಗಿಂತ ಹೆಚ್ಚು.*

*ನಿಸ್ವಾರ್ಥವೇ ದೇವರು ಎಂಬುದು ಬಲ್ಲವರ ಮಾತು ಈ ಮಹಾಗುಣ ಮನುಷ್ಯನ ಸ್ವಯಂಪೂರ್ಣ ಸ್ಥಿತಿ ಈ ಗುಣದಿಂದಲೇ, ಪ್ರೇಮ ತ್ಯಾಗ, ಸೇವೆ ಮುಂತಾದ ಮೌಲ್ಯಗಳು ಬರಲು ಸಾಧ್ಯವಿದೆ. ಶರಣರಲ್ಲಿದ್ದ ಈ ನಿಸ್ವಾರ್ಥ ಗುಣವೇ ಅವರ ಅಣ್ಣಂದಿರರಿಗೆ ಬಳುವಳಿಯಾಯಿತು. ಮನೆತನವನ್ನು ಒಡೆದು ಬೇರೆಯಾಗುವ ಸಂದರ್ಭ ಜನಪದರು. ಹೀಗೆ ವರ್ಣಿಸುತ್ತಾರೆ.*

ಹಿರಿಯಣ್ಣ ಹಿರಿಹೊಲ ಕಿರಿಯಣ್ಣ ಛಲೋಹೊಲ
ಕಿರಿಯಂವ ಶರಣಗ ಉಳದಾದ । ಶಿವಕೊಟ್ಟ
ಕರಕಿಯು ಬೆಳೆವ ಕಡಿಹೊಲ॥
ದೊಡ್ಡಂವ ದೊಡ್ಡಮನಿ ಸಣ್ಣಂವ ಛಲೋಮನಿ
ಬಿದ್ಮನಿ ಬಂತು ಶರಣಗ। ತಿಳಿಲಿಲ್ಲ
ಜಗವೆಲ್ಲ ಅವನ ಮನಿಯೆಂದು॥

ಒಳ್ಳೆಯದಾಗಿರುವದನ್ನೆಲ್ಲಾ ತಾವಿಟ್ಟುಕೊಂಡು ಶರಣರಿಗೆ ಹಾಳಾಗಿರುವದನ್ನು ಕೊಟ್ಟರಲ್ಲದೆ, ಹಡೆದ ಪಡೆದ ತಂದೆ-ತಾಯಿಗಳು ಶರಣರ ಪಾಲಿಗೆ। ಜಗದಾಗ ನನದೆಂತಹ ಭಾಗ್ಯ ಎನ್ನುತ್ತಾ ಶರಣರು ಆನಂದ ಪಡುತ್ತಾರೆ. ಕರಕೀಯ ಹೊಲವೆಂದು ಕಿರಿಕಿರಿ ಮಾಡದೆ ಕರವೆತ್ತಿ ಇರಲಿಯೆಂದು ಸ್ವೀಕರಿಸುತ್ತಾರೆ.

ಕರಕೀಯ ಹೊಲವನ್ನು ಶಿವಕೊಟ್ಟ ಪ್ರಸಾದವೆಂದು ಸ್ವೀಕರಿಸಿ ಶರಣರು ಹೆಗಲಿಗೆ ಬಾರುಕೋಲು ಹಾಕಿ ರೈತನಾಗಿ ದುಡಿಯಲು ಹೋಗುವರು ಅವರನ್ನು ಎಷ್ಟು ವರ್ಣಿಸಿದರೂ ಜನಪದರಿಗೆ ತೃಪ್ತಿಯಿಲ್ಲ. ಕಣ್ಣಿಗೆ ಕಟ್ಟುವಂತೆ ಆ ದೃಶ್ಯವನ್ನು ವರ್ಣಿಸುತ್ತಾರೆ.

ಜೋಡಕೂರಿಗಿ ಹೂಡಿ ಮೂಡಲೆತ್ತನು ಹೂಡಿ
ಮೂಡಲಾ ಹೊಲವ ಬಿತ್ಯಾರ। ಶರಣಪ್ಪ
ಕರಕೀಯ ಹೊಲವ ಬೆಳದಾರ॥

ಭಕ್ತಿ ಶ್ರದ್ಧೆಯಿಂದ ಮಾಡುವ ಶರಣರ ಕಾಯಕವು ಲೋಕಪ್ರಿಯ ಶಿವನನ್ನು ಸಂತೃಪ್ತಿಗೊಳಿಸಿತು. ದಾಸೋಹಕ್ಕಾಗಿ ಬಿತ್ತಿದ ಹೊಲಕ್ಕೆ ಮಳೆಯು ಬರಲಾರಂಭಿಸಿತು. ಬಿತ್ತುವ ಶರಣನ ಬೆನ್ಹತ್ತಿ ಮಳೆಯು ಬಂತು ಎಂದು ಹಾಡುತ್ತಾರೆ ಜನಪದರು. ಶರಣರು ಕರಕೀಯ ಹೊಲದಲ್ಲಿ ಬಿತ್ತಿದ ಬೀಜವು ಮೊಳಕೆಯೊಡೆಯುತ್ತವೆ.

ಜೋಡೆರಡು ಎತ್ತುಗಳ ಕೂರಿಗಿ ಹೂಡ್ಯಾರೊ
ಬೆನ್ನಿಲ್ಲದ ಬೀಜ ಬಿತ್ಯಾರೊ । ಶರಣರು
ಮೂರುದಿನಕ ಮೊಳಕಿ ನೋಡ್ಯಾರೊ॥

ಮೊಳಕೆಯೊಡೆದಬೀಜ ಬೆಳೆದು ನಿಂತಿದೆ, ತೆನೆತುಂಬ ಕಾಳಾಗಿ ನೋಡುವವರ ಕಣ್ಣು ಕುಕ್ಕುವಂತಿದೆ.

ಮಳೆಯಾಗಿ ಬೆಳೆಯಾಗಿ ತೆನೆತುಂಬ ಕಾಳಾಗಿ
ಬೆಳದಾನೊ ಜ್ವಾಳ ಹುಲುಸಾಗಿ। ಅವನಿಂದ
ಒಕ್ಕಲುತನವು ಹೆಸರಾಗಿ॥

ಅವರ ಪರಿಶುದ್ಧ, ನಿಸ್ವಾರ್ಥ ಕಾಯಕವು ಹೊಲದಲ್ಲಿ ಅದ್ಭುತ ಪ್ರಭಾವವೇ ಉಂಟುಮಾಡಿತು. ಹೊಲದ ತುಂಬ ಬೆಳೆದು ನಿಂತ ಬೆಳೆಯನ್ನು ನೋಡಿ ಪಾಲುಗಾರ ಲಿಂಗಣ್ಣ ಹೊಲಕ್ಕೆ ಬೇಲಿ ಹಚ್ಚಿದ್ದಾನೆ. ಆ ಬೇಲಿ ಕಂಡ ಶರಣರ ಎದೆಯೊಳಗೆ ಅಸಾಧ್ಯ ತಾಪ, ನೋವು, ಸಂಕಟ ಸ್ವಲಾಭ ಸಂಕುಚಿತ ಸ್ವಾರ್ಥಭಿಲಾಷೆಯಿಲ್ಲದೆ ಕರಕೀಯ ಹೊಲವನ್ನು ಹಸನು ಮಾಡಿದ್ದಾರೆ. ಬಿತ್ತಿದ್ದಾರೆ ಬೆಳೆದಿದ್ದಾರೆ. ಪ್ರತಿಫಲದ ಅಪೇಕ್ಷೆವಿಲ್ಲದೆ ಅದನ್ನು ಹಂಚಿ ಉಣ್ಣಬೇಕು ಎಂದು ಘನ ನಿಲುವು ತಾಳಿದ್ದಾರೆ. ಇದಾವದನ್ನು ಲೆಕ್ಕಿಸದೆ ಲಿಂಗಣ್ಣ ಬೇಲಿ ಹಚ್ಚಿದ್ದಾನೆ. ತಕ್ಷಣವೇ ಶರಣರು ಹೊಲದ ಬೇಲಿ ಕಿತ್ತು ಹಾಕಿದ್ದಾರೆ.

ಬೇಲಿ ಕಿತ್ತು ಹಾಕಿದ್ದೆ ತಡ ದಾರಿಯೊಳಗೆ ಹೋಗುವ ದನಕರುಗಳೆಲ್ಲಾ ಶರಣರ ಹೊಲದೊಳಗೆ ನುಗ್ಗಿವೆ, ಬೆಳೆಗೆ ಬಾಯಿಟ್ಟಿವೆ. ಇದನ್ನು ಕಂಡ ಶರಣರಿಗೆ ಖುಷಿಯೇ ಖುಷಿ। ತಕ್ಷಣವೇ ಶರಣರು ಮಾಡಿಸಿದ್ದೇನು?

ಮುಂಜಾನೆ ಎದ್ದಾನ ರಂಜಣಗಿ ಇಡಸ್ಯಾನ
ದಂಟಿಗೊಂದು ಮಗಿಯ ಕಟ್ಯಾನ। ಶರಣಪ್ಪ
ಸೇದಿ ಸೇದಿ ನೀರ ತುಂಬ್ಯಾನ
ಹಾರುವ ಹಕ್ಕಿಗಿ ಕೈ ಮಾಡಿ ಕರಿತಾನ
ಬಾಬಾ ಅನುತಾನ ದನಕರುವಿಗಿ। ಶರಣಪ್ಪ

ಹೊಲದಾ ಬೆಳೆಯಾಗ ಹೊಡೆದಾನ.

ಅದ್ಭುತ ಘಟನೆ। ಜಗತ್ತಿನ ಇತಿಹಾಸದಲ್ಲಿ ಅಪೂರ್ವ। ಶರಣರ ತ್ಯಾಗ, ಸೇವೆ, ಸಹನೆ- ಇವುಗಳಿಗೆ ಬೆಲೆ ಕಟ್ಟಲಾಗುತ್ತಿಲ್ಲ. ಮೂಕಲೋಕಕ್ಕೆ ಅವರು ಮಾಡಿರುವ ಸೇವಾ ವಿಧಾನ ಅನುಪಮವಾದುದು. ಒಂದು ದಿನವಾದರೂ ಅಲ್ಲ ಒಂದು ಕ್ಷಣವಾದರೂ ಅವರ ಈ ಆದರ್ಶ ಮಲೀನಗೊಳ್ಳಲಿಲ್ಲ.

ಮರ್ತ್ಯದಲ್ಲಿ ಮನುಷ್ಯನಂತೆಯೇ ಅನೇಕ ಜೀವರಾಶಿಗಳಿವೆ ಆದರೆ ಮಾನವ ತಾನೇ ಶ್ರೇಷ್ಟನೆಂದು ಹೇಳಿಕೊಳ್ಳುತ್ತಾ ಉಳಿದ ಪ್ರಾಣಿಗಳೊಡನೆ ಕ್ರೂರವಾಗಿ ನಡೆದುಕೊಂಡು ಅವುಗಳಿಗಿಂತ ಕಡೆಯಾಗುತ್ತಾನೆ. ಆದರೆ ನಾವು ಮಾಡುವ ಪ್ರೀತಿಯು ಮೂಕ ಜಂತುಗಳಿಗೆ ಅರ್ಥವಾಗುತ್ತದೆ. ಶರಣರು ತೋರಿದ ಆ ಪ್ರೀತಿ ಮೆಚ್ಚುವಂತಹದು. ಬುದ್ಧನು ಹೇಳುವಂತೆ- ಜಗತ್ತಿಗೆ ಬಂದ ಪ್ರತಿಯೊಂದು ಜೀವಿಯೂ ಸುಖಕ್ಕಾಗಿ ಹಾತೊರೆಯುತ್ತದೆ. ಎಲ್ಲರಿಗೂ ದಯೆ ತೋರಿ ಎಂಬನುಡಿ ಶರಣರಲ್ಲಿ ಪ್ರತಿರೂಪವಾಗಿತ್ತು.

ಶರಣಬಸವರು ಕೈಕೊಂಡ ಧರ್ಮದಲ್ಲಿ ಚಿಕ್ಕದಾದ ಇರುವೆಯಿಂದ ಹಿಡಿದು ಇಡೀ ಜೀವಕುಲವೇ ಪ್ರಸನ್ನಗೊಂಡಿತ್ತು. ಸಕಲ ಪ್ರಾಣಿಗಳಲ್ಲಿ, ದಯೆ ತೋರಿಸಿದ ದಯಾಮಯಿ ಅವರು ಪಶುಪಕ್ಷಿಗಳ ಮೇಲಿನ ಅವರ ಪ್ರೀತಿ ಅಸದೃಶ ಮಾನವನ ಮನಸ್ಸು ಅಹಿಂಸೆಯಲ್ಲಿ ಸದೃಢವಾದರೆ ಆತನ ಸಾನಿಧ್ಯದಲ್ಲಿ ಪ್ರಾಣಿಗಳು ತಮ್ಮ ಕ್ರೂರತನ ವೈರತ್ವ ಬಿಡುತ್ತವೆ. ಪ್ರೀತಿ, ಕರುಣೆ ಅಹಿಂಸೆಯ ಇನ್ನೊಂದು ಮುಖ ಅದಕ್ಕೆ ಶರಣಬಸವೇಶ್ವರರ ಚರಿತ್ರೆ ಒಂದು ಜ್ವಲಂತ ಉದಾಹರಣೆ.

ಈವೆರಡು ಅಹಿಂಸೆಯ ಮುಖಗಳಾಗಿ ಶರಣಬಸವರಲ್ಲಿ ಉದ್ಭವಿಸಿದವು. ಅವುಗಳ ಮೇಲಿನ ದಯೆಯೇ ಅವರಲ್ಲಿ ದಾಸೋಹಕ್ಕೆ ಬೀಜವಾಯಿತು. ಕರಕೀಯ ಹೊಲವೇ ಅವರಿಗೆ ಕಾಯಕವಾಗಿ, ಹಾರುವ ಹಕ್ಕಿಗಳು ಜಂಗಮರಾಗಿ, ದನಕರುಗಳೆಲ್ಲಾ ಗುರುವಾದವು ಅವರಿಗೆ ಎನ್ನುತ್ತಾರೆ ಜನಪದರು. ಹಕ್ಕಿಗಳಿಗಂತೂ ಆತನ ಹೊಲ ತಮ್ಮದ್ದೆನ್ನುವಷ್ಟು ಆನಂದ ಏಕೆಂದರೆ ಶರಣರು ಮಂಚವು ಹಾಕಿಲ್ಲ, ಹಕ್ಕಿಯು ಹೊಡದಿಲ್ಲ ಚುಂಚ್ಹಾಕಿ ತೆನೆಯ ತಿನ್ನುತಾ ಅವು ತಮ್ಮೊಳಗೆ ಹೀಗೆ ಮಾತಾಡುತ್ತೇವೆ.

ಹಕ್ಕಿ ಬಂದಾವ ಹಾರಿ ತೆನಿಯಾ ತಿಂದಾವ ಹೀರಿ
ಗಿಡದಾ ನೆರಳಿಗೆ ಕುಂತಾವ। ಮಾತಾಡುತ್ತಾವ
ಶಿವಹನಾ ಏನು ಶರಣಪ್ಪ.
ಹಕ್ಕಿ ಬಂದಾವ ಜೋರ ತೆನಿಯಾ ತಿಂದಾವ ಪೋರ
ಗಿಡದಾ ನೆರಳಿಗೆ ಕುಂತಾವ। ಮಾತಾಡುತ್ತಾವ
ದಾಸೋಹ ಇಟ್ಟಾರ ಶರಣಪ್ಪ

ಶರಣರ ಶಿವಭಾವವನ್ನು ಮನುಷ್ಯರಿಗಿಂತಲೂ ಮೊದಲೇ ಹಕ್ಕಿ-ಪಕ್ಕಿಗಳು ಕಂಡಿವೆ ಅವು ಶರಣರಲ್ಲಿ ಶಿವತ್ವವನ್ನು ಗುರುತಿಸಿದವು. ಹೊಲದಲ್ಲಿ ಎಲ್ಲಾ ಜೀವಸಂಕುಲಕ್ಕೆ ಮುಕ್ತ ಅವಕಾಶವನ್ನು ಒದಗಿಸಿಕೊಟ್ಟ ಶರಣಬಸವರು ಪಕ್ಷಿ ಸಂಕುಲಕ್ಕೆ ಆ ಶಿವನೇ ಆಗಿದ್ದಾರೆ. ಹಕ್ಕಿ, ಪಕ್ಕಿ, ದನ, ಕರು-ಮೇಯ್ದು, ಮನುಷ್ಯರು ತಿಂದು ಉಳಿದುದರಲ್ಲಿ ಶರಣಬಸವರು ರಾಶಿ ಮಾಡಲು ಸನ್ನದ್ಧರಾಗಿದ್ದಾರೆ. ಆಶೆಯಿಲ್ಲದ ರಶಿ ಶರಣರದು.

ಪುಂಡಭೂಮಿ ಮ್ಯಾಲ ಗುಂಡರ ಖಣಮಾಡಿ
ಗುಂಡಿಗಿ ಮೇಟಿ ಹೊಡದಾನೊ। ಶರಣಪ್ಪ
ದಿಂಡಿಯ ಕಟ್ಟಿ ಮುರಸ್ಯಾನೋ॥

ಶರಣರು ದೂಡು ಮುರಿಯಲು ಎಲ್ಲರಿಗೂ ಕರೆಯುತ್ತಾರೆ. ಆದರೆ ತೆನಿಯಿಲ್ಲಿರುವ ಕಾಳುಗಳೆಲ್ಲ ಪಕ್ಷಿಗಳು ತಿಂದು ಹೋಗಿರುವುದರಿಂದ ಬರೀ ಹೊಲಕ್ಕೆ ಯಾರೂ ಬರಲು ಒಪ್ಪಲಿಲ್ಲ ಆದರೆ ಅವರ ಮಹಿಮೆಯನ್ನರಿತ ಮುಪ್ಪಾದ ಮುದುಕಿ ಮಾತ್ರ ಶರಣರ ಹೊಲಕ್ಕೆ ಬರಲು ಉಪ್ಪುತ್ತಾಳೆ.

ಕಂಕ್ಯಾಗ ಕಾಳಿಲ್ಲ ಕರೆದರ‍್ಯಾರು ಬರಲಿಲ್ಲ
ಮುಪ್ಪಾನ ಮುದುಕಿ ಮರಿತೀತೊ। ತೆನಿಗಣಕಿ
ಬ್ಯಾಸರಿಲ್ಲದ್ಹಾಂಗ ಹಾಡ್ಯಾಡಿ॥

ಬರಿದಾದ ತೆನಿಗಣಕಿಯನ್ನು ಮುದುಕಿ ಸಂತೋಷದಿಂದ ಮುರಿಯುತ್ತಿದ್ದಾಳೆ ಆಕೆಯ ಕಾಯಕದ ಪರಿಗೆ ಮನಸೋತ ಶರಣರು ಆಕೆಗೆ ಕಾಯಕದ ಕೂಲಿ ಕೊಡುತ್ತಿದ್ದಾರೆ.

ಗಂಗೆ ಮಾರಿಗಿ ನಿಂತು ಗೊಂಗಡಿ ಟೊಪ್ಪಿಗೆ ಮಾಡಿ
ಮುದುಕಿಗಿ ಕೂಲಿ ಹಾಕ್ಯಾರೊ। ಶರಣಪ್ಪ
ನಗುತಲಿ ಆಕಿಗಿ ಖಳುವ್ಯಾರೊ॥

ಜೋಳವಿಲ್ಲದ ತೆನಿಯನ್ನೆ ಮುದುಕಿಗೆ ಶಾಂತ ಮನಸ್ಸಿನಿಂದ ಕೊಟ್ಟು ಕಳುಹಿಸುತ್ತಾರೆ ಮುದುಕು ಅದನ್ನು ಒಯ್ದು ಮೂಲೆಗೆ ಹಾಕಿ ಬಡಿದರೆ ಆಶ್ಚರ್ಯ ಪಡುವಷ್ಟು ಜೋಳ: ಮುದುಕಿಗೆ ಸಂತೋಷ ಉಳಿದ ಜನರಿಗೆ ಆಶ್ಚರ್ಯ, ಗಾಬರಿ ಇದಕ್ಕೆ ಶರಣಬಸವರ ಧರ್ಮದ ಹಸ್ತೇ, ದಾಸೋಹದ ಮನವೇ ಕಾರಣವೆಂಬುದು ಎಲ್ಲರಿಗೂ ಗೊತ್ತಾಯಿತು.

ಹೊಲದ ಬೆಳೆಯಲ್ಲಿ ಕಾಳಿಲ್ಲದಿದ್ದರೂ ಶರಣರು ತೃಪ್ತರಾಗಿದ್ದಾರೆ. ತುಂಬಿದ ಸಾಗರವಾಗಿದೆ ಅವರ ಮುಖ ಪರಮಾತ್ಮನ ಮೇಲೆ ಬಲವಾದ ನಂಬಿಕೆ ಇಟ್ಟಿರುವುದರಿಂದ ಶರಣರು ಸಮುದ್ರದಂತೆ ಸ್ಥಿರವಾಗಿದ್ದಾರೆ. ಪ್ರಾಪಂಚಿಕ ಬಯಕೆಗಳು ಅವರಲ್ಲಿ ಇಲ್ಲವಾಗಿರುವುದರಿಂದ ಅಂತಹ ಹೊಲದಲ್ಲಿಯೂ ಶರಣರು ಪರಿಪೂರ್ಣರಾಗಿದ್ದಾರೆ ಎನ್ನುತ್ತಾರೆ ಜನಪದರು.

ಚಿಂತೆಯು ಮಾಡಿಲ್ಲ ಕಣ್ಣೀರ ಹಾಕಿಲ್ಲ
ಸಂತಸಗೊಂಡಾದ ಆ ಜೀವ । ಶರಣಪ್ಪ
ಕಂತಹರನ ಮ್ಯಾಲ ಹಾಕ್ಯಾರ.

ಅಂತಹ ಹೊಲದಲ್ಲಿಯೇ ರಾಶಿ ಮಾಡಲು ಶರಣರು ಸಿದ್ದರಾಗಿದ್ದಾರೆ. ಅವರು ಮಾಡುವ ರಾಶಿಯಲ್ಲಿ ಒಂದು ಮಹಾನ್ ತತ್ವವೇ ಗುರುತಿಸಿದ್ದಾರೆ ಜನಪದರು.

ಮೂರು ಕಾಲಿನಾ ಮೆಟ್ಟು ಮೂರು ಲಿಂಗಗಳಾಗಿ
ತೂರುವ ರಾಶಿ ಶಿವನಾಗಿ। ಶರಣಪ್ಪ
ತೂರಿದಾ ರಾಶಿ ಶಿವಮತಕೆ.

ಅಂತಹ ಹೊಲದಲ್ಲಿ ಶರಣರು ರಾಶಿ ಮಾಡಿದ್ದ ಲೆಕ್ಕ ಜನಪದರಲ್ಲಿ ಹೀಗಿದೆ.

ಹಿರಿರಾಶ್ಯಾಗ ಸಾವಿರ ಕರಿಕ್ಯಾಗ ಐನೂರ
ತಲಿರಾಶಿಗೇನು ಕಮ್ಮಿಲ್ಲ । ತೆನಿಗಳು
ಸೂಸಲ್ಯಾಡಾವ ಕಣದಾಗ॥

ಶಿವಮತಕ್ಕಾಗಿ ಶರಣರು ಶಿವನಾಗಿಯೇ ರಾಶಿ ಮಾಡಿದರು. ಅಂತೆಯೇ ಶರಣರ ಭಾವಕ್ಕೆ ಶಿವನು ಒಲಿದಿದ್ದಾನೆ. ಹೀಗಾಗಿ ಮಾಡಿದ ರಾಶಿ ಸಾವಿರದಾನೂರಕ್ಕೂ ಮೀರಿತು. ತನ್ನ ಒಡಲ ತೃಪ್ತಿಗಾಗಿ ಏನೊಂದು ಬಯಸದೇ ಎಲ್ಲವೂ ಶಿವನದೇ ಎಲ್ಲವೂ ಅವನಿಗಾಗಿಯೇ ಎಂಬ ಈ ಶಿವಪ್ರಜ್ಞೆಯೆ ಈ ರಾಶಿಗೆ ಕಾರಣವಾಯಿತು. ಅಹಂಕಾರ ರಹಿತರಾಗಿ ಆ ರಾಶಿಯ ಒಡೆತನದ ಭಾವವನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆ ಶರಣರು.

ರಾಶಿಯು ತಾಕಂಡು ಆಶೆಯು ಮಾಡಿಲ್ಲ
ಈಶನು ಕೊಟ್ಟಿದು ಎನುತಲಿ। ಶರಣಪ್ಪ
ಹೊಲದಾಗ ನಿಂತು ಹಂಚ್ಯಾರ॥
ಒಂದುತಾಳಿನ ಬೆಳೆಯು ದನಕರುಗಳಿಗಿಟ್ಟು
ಹಿಂದಿನ ಬೆಳೆಯು ಪಶುಪಕ್ಷಿಗಿಟ್ಟು। ಶರಣಪ್ಪ
ಉಳಿದಿದ್ದು ದಾಸೋಹ ಮಾಡ್ಯಾರ.

ದಾಸೋಹವೆಂದರೆ ಸುಖದ ಸುಖ ಶರಣರಿಗೆ. ಅದರಲ್ಲಿ ಮುಳುಗಿ ಓಲಾಡುತ್ತಿದ್ದಾರೆ। ಎಲ್ಲವನ್ನು ಜೀವಸಂಕುಲಕ್ಕೆ ಅರ್ಪಿಸಿದ್ದಾರೆ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ ತನು-ಮನ-ಧನದಿಂದ ಗುರು-ಲಿಂಗ-ಜಂಗಮರ ದಾಸೋಹಗೈಯುತ್ತಾ ದಾಸೋಹಕ್ಕಾಗಿ ಶಿವಕೊಟ್ಟ ಹೊಲದಲ್ಲಿ ಕಾಯಕ ಗೈಯುತ್ತಾ, ಬಸವಾದಿ ಪ್ರಮಥರನ್ನು ಧ್ಯಾನಿಸುತ್ತಾ ಶರಣಬಸವರು ಶಿವಸಂಪನ್ನರಾಗಿದ್ದಾರೆ. ಅದನ್ನೆ ಜನಪದರು.

ಕಣ್ಣು ಮುಚ್ಚಿದರ ಶಿವಧ್ಯಾನ ಮನದಾಗ
ಕಣ್ಣು ತೆರೆದರೆ ದಾಸೋಹ। ಸತಿಪತಿ.
ದಾಸೋಹ ನಡೆಸಿ ಭಕ್ತಿಲಿ
ಆಡಿದ್ದ ಮಂತ್ರಾಯಿತು ಮಾಡಿದ್ದ ಮಾಟಾಯಿತು
ಕೈಮುಟ್ಟಿ ಕೊಟ್ಟದ್ದು ಹೊನ್ನಾಯ್ತು। ಶರಣರ
ತನುವದು ಜ್ಞಾನದ ಗಣಿಯಾಯ್ತು.

ಸತ್ಯವಂತರ ಮನದಲ್ಲಿ ಯಾವಾಗಲೂ ನಿರ್ಮಲವಾದ ಶಾಂತಿ ನೆಲೆಸಿರುತ್ತದೆ. ಭೀತಿ ಅವರ ಹತ್ತಿರ ಸುಳಿಯುವದಿಲ್ಲ ಮಾಡಬೇಕಾದುದ್ದನ್ನು ತುಂಬಾ ಅಚ್ಚುಕಟ್ಟತನದಿಂದ ನಿರ್ವಹಿಸಿರುವದರಿಂದ ಅವರಲ್ಲಿ ಸದಾ ತೃಪ್ತಿಯ ಮನೋಭಾವ ಉಳಿದಿರುತ್ತದೆ. ನಡೆ-ನುಡಿಗಳಲ್ಲಿ ಒಂದೇ ರೂಪವಿರುತ್ತದೆ. ಸತ್ಯಕ್ಕೆ ಫಲ ಸಿಗುತ್ತದೆಯೆಂಬ ಆತ್ಮ ವಿಶ್ವಾಸವಿರುತ್ತದೆ. ಇತರರಿಗೆ ಮೆಚ್ಚಿಸಬೇಕೆಂಬ ಹುಚ್ಚು ಹವ್ಯಾಸಗಳಿರುವುದಿಲ್ಲ. ಇಂತಹ ವ್ಯಕ್ತಿತ್ವ ಇನ್ನೊಬ್ಬರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವದು ಅಂತಹ ಸದ್ಗುಣವಂತಿಕೆ ಶರಣಬಸವರಲ್ಲಿ ಕಂಡಿದ್ದಾರೆ. ಜನಪದರು ಲೋಕಕ್ಕೆ ಆಗಾಧ ಅಗಮ್ಯವಾಗಿರುವ ಶರಣರ ಜೀವನದ ಪರಿಯನ್ನು ಪರಪರಿಯಿಂದ ವರ್ಣಿಸುತ್ತಾರೆ. ಅವರು ಷಟ್‌ಸ್ಥಲ ಹೃದಯ ಸಂಪನ್ನರಾಗಿದ್ದಾರೆ. ಅಂತಹ ಧರ್ಮ ಹಿಡಿದು ಹೊರಟ ಶರಣಬಸವರು ಜೀವನವು ಪಾಪಮಯವೆಂದು, ಜಗತ್ತು ಮಿಥ್ಯೆವೆಂದು ತಿಳಿಯಲಿಲ್ಲ. ಎಲ್ಲರಿಗೂ ಬದುಕುವ ಹಕ್ಕು ಇದೆಯೆಂದು ತಿಳಿದು ಧರೆಯ ಜನರಿಗೆಲ್ಲಾ ಒಳಿತನ್ನೆ ಬಯಸಿ ಮಹಾಂತನಾದರು ಎನ್ನುತ್ತಾರೆ ಜನಪದರು. ಶರಣರ ಶರಣತ್ವವನ್ನು ಒರೆಗಿಟ್ಟು ನೋಡುವ ಅನೇಕ ಘಟನೆಗಳನ್ನು ಜನಪದರು ಗುರುತಿಸುತ್ತಾರೆ. ಅವೆಲ್ಲಾ ಅವರಿಗೆ ಶರಣಲೀಲೆಗಳಾಗಿವೆ.ಬಸವಾದಿ ಪ್ರಮಥರ ಮಾರ್ಗವನ್ನು ಹಿಡಿದು ತನ್ನ ದಾಸೋಹ ಕೂರಿಗೆಯನ್ನು ಸಾಕ್ಷಾತ್ ಶಿವನಾಗಿ ಎಳೆಯುತ್ತಿದ್ದಾರೆ. ಶರಣರ ಭಕ್ತಿಯ ದಾಸೋಹ ಕಾರ್ಯಕ್ಕೆ ಎಳ್ಳಷ್ಟು ಕುಂದಿಲ್ಲ.

ಬೆಳೆಯುತ ಶರಣಪ್ಪಗ ಶಿವಭಕ್ತಿ ಕೆಲಸಾಯ್ತು

ದಾಸೋಹ ಪೂಜೆ ಹೆಚ್ಚಾಯ್ತು । ಶರಣಪ್ಪ

ನಂಬಿತಾ ನಡೆದ ಶಿವಧರ್ಮ.

ದಾಸೋಹ ಸೇವೆ, ಶಿವಸೇವೆ ಎಂದು ಭಾವಿಸಿದವರು ಅವರು. ಹೀಗಾಗಿ ಎಲ್ಲರನ್ನು ಗುರು-ಲಿಂಗ-ಜಂಗಮರಾಗಿಯೇ ಕಂಡವರು. ಶರಣರ ಧರ್ಮದಲ್ಲಿ ಇವು ಒಂದು ಘಟಕವಾಗಿದೆ. ವಿಶ್ವರೂಪಿ ಶಿವನನ್ನು ಈ ಮೂರರ ಮೂಲಕ ಆರಾಧಿಸಬೇಕು, ಕಾಣಬೇಕು, ಪಡೆಯಬೇಕು. ಈ ತ್ರಿವಿಧದಲ್ಲಿ ಪರಶಿವನಿದ್ದಾನೆ. ಈ ತ್ರಿವಿಧಕ್ಕೆ ಸಲ್ಲುವ ಭಕ್ತಿ ಅದು ದಾಸೋಹ ಎನಿಸಿದೆ ಶರಣರಿಗೆ.

ಇಂತಹ ತ್ರಿವಿಧ ಭಕ್ತಿಯಲ್ಲಿ ಶರಣ ದಂಪತಿಗಳಿರ್ವರು ಏಕೋಭಾವವುಳ್ಳವರಾಗಿದ್ದಾರೆ. ಇಂತಹ ಶಿವಧರ್ಮ ನಂಬಿ ನಡೆದ ಶರಣರಿಗೆ ಒಂದು ಸಲ ದಾಸೋಹ ನಿಲ್ಲುವ ಪರಿಸ್ಥಿತಿ ಬಂತು ಎನ್ನುತ್ತಾರೆ ಜನಪದರು. ತನ್ನ ಮನೆಗೆ ಬಂದ ಎಲ್ಲರನ್ನು ಜಂಗಮ ಎಂದು ನಂಬಿದ ಶರಣರಿಗೆ ಆ ಜಂಗಮರ ಸೇವೆಗೆ ಕೊರತೆ ಉಂಟಾದರೆ ಶಿವನು ಹೇಗೆ ಸಹಿಸುವನು. ಅವರ ಭಕ್ತಿಯನ್ನು ಶಿವನು ಅರಿಯದಿರುವನೆ? ತನ್ನಲ್ಲಿ ಸರ್ವಾರ್ಪಣಗೈದ ಭಕ್ತದ ಯೋಗಕ್ಷೇಮ ನೋಡಿಕೊಳ್ಳಲಾರನೆ?

ಬಡತನ ಎಂಬುದು ಬಲುಕೆಟ್ಟ ತಂಗೆವ್ವಾ

ಬಿಡಲಿಲ್ಲ ಅದು ಯಾರಿಗೂ ಶರಣರಿಗೆ

ಬಡತನ ಬಂತು ಒಂದಿನ ॥

ಆದರೆ ಶರಣರು ಬಡತನ ಬಂದರೂ ಸತ್ಯಹರ

ಎನ್ನುತ್ತಾರೆ ಜನಪದರು.

ಇಲ್ಲೆಂಬ ಸೊಲ್ಲವು ಅವರಲ್ಲಿ ಮೊದಲಿಲ್ಲ

ಒಲ್ಲೆಂಬ ಮಾತು ನುಡಿಲಿಲ್ಲ । ಶರಣರು

ಎಲ್ಲಭಾರ ಹಾಕಿ ಶಿವನ್ಮ್ಯಾಲ॥

ದಾಸೋಹವೇ ಉತ್ತಮ ಧರ್ಮ, ಉನ್ನತ ಸತ್ಕರ್ಮ, ಉಪಚಾರಕ್ಕಿಂತ ಉತ್ಕೃಷ್ಟವಾದ ಉಪಾಸನವಿಲ್ಲ. ಉಪಚಾರದಲ್ಲಿ ಹೆಚ್ಚಿನ ತೃಪ್ತಿಯಿತ್ತು ಶರನಬಸವರಿಗೆ ಭಕ್ತರನ್ನೆ ಭಗವಂತನೆಂದು ತಿಳಿದು ಆ ದೇವೋಪಾಸನೆಯಲ್ಲಿ, ದಾಸೋಹ ಸೇವೆಯಲ್ಲಿ ನಿರತರಾದವರು ಶರಣರು. ಏನೊಂದು ಬಯಸಲಿಲ್ಲ. ಅವರನ್ನು ಉಪಚರಿಸುವ ದಾಸ್ಯತ್ವವೊಂದನ್ನೆ ಬಯಸಿದವರು. ಶಿವಯೋಗ ನಿಷ್ಠರಾದ ಶರಣಪ್ಪ ಜಗದಾತ್ಮತ್ವ ಭಾವನೆ - ಉಳ್ಳವರಾಗಿದ್ದರು ಇವರ ವಿಶಾಲ ಮನಸ್ಸಿಗೆ ಯಾವುದು ದೂರಲ್ಲ, ಸಾಧ್ಯವು ಅಲ್ಲ.

ಶರಣಬಸವರಿಗೆ ತಮ್ಮ ಆಧ್ಯಾತ್ಮ ಸಾಧನೆಯಲ್ಲಿ ಉನ್ನತ ಶಿಖರಕ್ಕೆರುತ್ತಿರುವದಕ್ಕೆ ಹೊರಗಿನ ಸಹಾಯಕ್ಕಿಂತ ಹೆಚ್ಚಾಗಿ ಅವರ ನಿಷ್ಕಲ್ಮಷ ಮನಸ್ಸಿನ ಪ್ರೇರಣೆಯೆನ್ನಬಹುದು. ತಮ್ಮಲ್ಲಿ ಸತತ ಪರಿಶ್ರಮದಿಂದಲ್ಲೇ ಅವರು ಉನ್ನತ ಸ್ಥಿತಿಯತ್ತ ನಡೆದರು. ಅವರಿಗೆ ಅವರ ಗುರುಗಳಿಂದ ಸ್ವಲ್ಪ ಮಟ್ಟಿನ ಉಪದೇಶ ಮತ್ತು ಮಾರ್ಗದರ್ಶನ ಸಿಕ್ಕಿತು ನಿಜವಾದರೂ, ಅವರು ಸ್ವತ ತಮ್ಮ ಗುರುಗಳ ಮೇಲೆಯೇ ಬೀರಿದಂತಹ ಪ್ರಭಾವ ಅಷ್ಟೇ ಮಹತ್ವದ ಸಂಗತಿಯಾಗಿದೆ. ತಾವು ಶಿಷ್ಯರಾಗಿದ್ದರೂ ಕೂಡ ಸಾಧನೆಯೊಳಗೆ ಗುರುಮುಟ್ಟಿ ಗುರುವಾದರು. ಅಂತೆಯೇ ಜನಪದರ ಪತ್ರಿವನದಲ್ಲಿ ನಡೆದ ಶರಣರ ಪೂಜೆಯನ್ನು ಕಂಡು ಭಕ್ತಿ ಭಾವದಿಂದ ವರ್ಣಿಸುತ್ತಾರೆ.

ತನ್ನನು ತಾ ಮರೆತ ಸನ್ನೂತ ಶಿವಶರಣ

ತನುಮನದಿಂದ ಒಂದಾಗಿ। ಅದರಾಗ

ಮುಂದಿನ ಹಾದಿ ಕಂಡಾ॥

ಶರಣರ ಪೂಜಾ ವೈಖರಿ ಅಲ್ಲಿ ಹೇಗಿತೆಂದರೆ

ದೀಪಿಲ್ಲ ಘಂಟಿಲ್ಲ ಅಕ್ಷತೆಯ ಅಲಲ್ಲಿ

ಹಚ್ಚಲು ಊದಿನ ಬತ್ತಿಲ್ಲ।

ಬೆಳಗಾಕ ಆರತಿ ತಾಟಿಲ್ಲ

ಅರಿವೆಂಬ ಆರತಿ ಘನತಾರೆ ಅಕ್ಷತೆಯು

ಮನವೆಂಬ ಬತ್ತಿಯು ಜ್ಞಾನವೆಂಬ ದೀಪವು

ಶರಣರ ಪೂಜಾಕ ಸಲ್ಯಾವ ।

ಗಂಟೆ ಗಂಟೆ ಹಾಗೆ ಪೂಜೆ ನಡೆದಿದೆ. ನಿಶ್ಯಬ್ದವಾದ ಸ್ಥಳ ರಾಮಜಿಯು ಯಾವ ಶಬ್ದ ಮಾಡದೆ ತನ್ನ ಧ್ಯಾನದಲ್ಲಿ ತಾ ಮಗ್ನನಾಗಿದ್ದಾನೆ. ಆದರೆ ಬಹಳ ಹೊತ್ತಿನ ನಂತರ ಪೂಜೆ ಮುಗಿಸಿದ ಮೇಲೆ ಶರಣರು ಕಣ್ತೆರೆದು ನೋಡುತ್ತಾರೆ. ಸುತ್ತೆಲ್ಲ ಹರಡಿರುವ ಪತ್ತರಿ ದಳಗಳು ಹಾಲು ಚಲ್ಲಿದಂತಹ ಚಂದ್ರನ ಬೆಳದಿಂಗಳು ಶರಣರ ಮನಸ್ಸು ಪೂಜೆಯಲ್ಲಿ ಬಹಳ ಶಾಂತವಾಗಿದೆ ಎದುರಿಗೆ ಕುಂತಿರುವ ಶಿಷ್ಯ ರಾಮಜಿ ದಾದಾನು ಕಣ್ತೆರಿದಿದ್ದಾನೆ. ಶರಣರಿಗೆ ನಮಿಸಿ ಎದ್ದು ನಿಲ್ಲುತ್ತಾನೆ. ಆಗ ಇಬ್ಬರು

ಮುಚ್ಚಿ ತಾ ತಂದಿರುವ ಗೋಧಿಯ ಸಜ್ಜಕ

ಭಕ್ತಿಲಿ ಸೇವಿಸಿ ಇಬ್ಬರೂ । ಬಾವಿಯಾ

ನೀರ್ಕೂಡಿದು ಮುಂದ ಹೊಂಟಾರ ॥

ಆದರೆ ಮುಂದಕ್ಕೆ ಹೊರಟ ಶರಣರಿಗೆ ಅತೀವ ದುಃಖವನ್ನುಂಟು ಮಾಡಿದೆ. ಅದನ್ನೆ ಜನಪದರೂ,

ಹುಟ್ಟೂರಿನ ತಳಬಿಟ್ರು ಆಗಿಲ್ಲ ಆ ದುಃಖ

ಮಡದಿಗಿ ಬಿಟ್ಟರು ಆಗಿಲ್ಲ। ಶರಣರಿಗೆ

ಆಗ್ಯಾದ ಈಗ ಬಲುದುಃಖ

ಹುಟ್ಟಿದ ಮನೆ, ಊರು, ಬಂಧು, ಬಳಗ, ಮಡದಿಯನ್ನು ಬಿಟ್ಟು ಬರುವಾಗ ಶರಣರು ಸಂತೋಷದಿಂದಲೇ ಬಂದಿದ್ದಾರೆ. ಆದರೆ ಪತ್ರಿವನ ಬಿಡುವ ಸಂದರ್ಭದಲ್ಲಿ ಅವರಿಗೆ ದುಃಖ ಆವರಿಸಿದೆ. ಸಾಷ್ಟಾಂಗ ಹಾಕ್ಯಾರ ಪತ್ತರಿ ವನಕ್ಕ ಎನ್ನುತ್ತಾರೆ ಜನಪದರು.

ಹೀಗೆ ಬಾಯೊಳಗೆ ಓಂನಮಃ ಶಿವಾಯಃ ಓಂನಮಃ ಶಿವಾಯಃ ಎನ್ನುತ್ತಾ, ಶರಣರು ಸತ ಮಾರ್ಗ ಹಿಡಿದಿದ್ದಾರೆ. ಈ ಪ್ರಕೃತಿಯಲ್ಲಿರುವ ಎಲ್ಲಾ ವಸ್ತುಗಳು ನಾಶ ಹೊಂದುತ್ತವೆ. ಆದರೆ ಈ ನಾಶದ ಪ್ರಕೃತಿಯಲ್ಲಿಯೇ ಅಚಲವೂ, ಅವಿನಾಶಿಯೂ ಆದ ಪರಮಾತ್ಮನನ್ನನು ಕಂಡುಕೊಂಡವರು ಶರಣಬಸವೇಶ್ವರರು. ಆ ಶಿವಚಿಂತೆ ಮತ್ತು ಶಿವಜ್ಞಾನದಲ್ಲಿಯೇ ಇದ್ದ ಶರಣರು ಸಂಸಾರದಿಂದ ಚಿಂತೆಯಿಂದ ವಿಮುಕ್ತರಾಗಿದ್ದಾರೆ. ಆ ಶಿವ ಚಿಂತೆಯು ಅವರ ತನು-ಮನಗಳಲ್ಲಿ ತುಂಬಿ ಅವರು ನಿರ್ಭಿತರಾಗಿದ್ದಾರೆ.

ISSN 2454-7255 Original Article VOL 5|ISSUE 2|Mar-2015
Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org

# Gangamma and Sankavve

**Smt, Shridevi S. Harwal**
HOD, Economics, Godutai Doddappa Appa Arts & Commerce, Degree College for Women
Kalaburagi-585103

***Abstract***

*Sankavve took the kayaka of prostitute before she became a Shivasharane. She led a life of austerity with self respect and self pride. She was a brave women to defy social restrictions and to opt sharana way of life amidst derision and opposition, since once a prostitute, the society would ever look down upon her as a prostitute. She sublimates her experience as a prostitute, and tries to explain transcendental mystic experience in terms of her worldly experience as a prostitute. Loyalty to one's kayaka is as important as observance of any other rule.*

## Introduction

She says every one must follow the principle of honesty. One should pursue the kayaka as, how so low it may look in the eyes of common man; it must be performed without any hesitation and inferiority complex. Any kayaka must be performed with purity of mind and heart. Her worshipping God and pen name is Nirlajjeshwara. She has written only one vachana and it is as follows.

"If you take a person on lease,
And leave him in preference to another,
They will strip you naked and kill you,
If you join a vow-breaker knowingly,
They will chap off your hands, ears and nose
With a hot blade, O Sir,
No, no; I won't join a vow-breaker,
As I know the consequence of such a mis-deed,
Your curse on me if I do so,
O Nirlajjesvara!"

Sankavve very proudly accepts that she is doing the kayaka of prostitution. Regarding her kayaka she says, when she one person on lease she should not accept the other person. If she does so she will be stripped naked and will be killed by her worshipping God. She further says she do not want to sleep with a vow breaker [who is morally degraded]. Again if she does so God Nirlajjeshwara will chop off her ear, nose and head with a hot blade. Thus she says she will not join the vow breaker as she knows the consequences. She tells, God Nirlajjeshwara can curse her if she does so.

Gangamma

Gangamma, the wife of Marayya, also took the work of prostitute. She too did not sleep with vow-breakers. Work of Sankavve and Gangamma was outside the Anubhava Mantapa. Though they were prostitutes, they never sold their souls to the merchant hell, as prostitutes normally do. To them their work was as sacred as Linga worship and vow-keeping. Gangamma's views on Kayaka are extraordinary:

"Whatever be the kayaka a devotee pursues,

It makes no difference.
Whatever be the Vrata [vow] a devotee pursues,
It makes no difference.
No death to the vow keepers and
No union to the vow-breaker.
If the faithful in vow joins the faithless one,
They are sure to go to hell,
Since their union is ill matched
Like that of peacock and a crow,
In Gangeshwaralinga"

Gangamma says all works are equal. She also like Sankavve says that she too will not join the vow breaker. If at all she joins it becomes a mis match like peacock joining the crow.

**References:**


1) Dr. C. R. Yaravintelimath, "*The women who were intellectual companions", Basava Journal*, July-December, 2007, Basava Samiti, Basava Bhavan, Basaveshwara Road, Bangalore-560001,

2) Dr. C. R. Yaravintelimath, Tr (translated in English) "*Vachanas of Women Saints" Samagra Vachana Samputa Vol, 05, (kannada),* Published by, Basava Samiti, Basaveshwara Road, Bangalore-560001.

*3)* Prof. B. Virupakshappa, "The five great principles of Social Reconstruction", *Aroma of Sarana Culture*, Basava Samiti, Basava Bhavan, Basaveshwara Road, Bangalore-560001, 2006,

4) Prof. D. Javaregowda, TR Dr. C. R. Yaravintelimath, "Economic Thoughts", *Basaveswar-Ambedkar*, Basava Samiti, Basava Bhavan, Basaveshwara Road, Bangalore-560001, 2006,

5) Dr B. R. Hiremath, (Editor, Professor, Institute of Kannada Studies, Karnataka University, Dharwad) "*Sankirna Vachana Samputa*" (Kannada) Vol; IX, , TR(translated in English by Researcher), The Administrative Officer, Kannada

Pustaka Pradhikara(Kannada Book Authority), Pampa Mahakavi Road, Chamarajpet, Bangalore-560018, 1993

6) B. Mahavadevappa, “*Arivu Achara*”(kannada), (translated in English by Research Scholar), Satyashree Printers, Private Ltd, Chamarajpet, Bangalore-560018, 1999,

7) S. Shivanna, (Editor) “*Sankirna Vachana Samputa*”, (Kannada) Vol; XI; TR(translated in English by Researcher) The Administrative Officer, Kannada Pustaka Pradhikara(Kannada Book Authority), Pampa Mahakavi Road, Chamarajpet, Bangalore-560018

8) Dr Veeranna Rajur, (Editor, Professor, Institute of Kannada Studies, Karnataka University, Dharwad) “*Sankirna Vachana Samputa*”, (Kannada) Vol; XIV;, TR(translated in English by Researcher)The Administrative Officer, Kannada Pustaka Pradhikara(Kannada Book Authority), Pampa Mahakavi Road, Chamarajpet, Bangalore-560018, 1993,

**ISSN 2454-7255** **Original Article** **VOL 5|ISSUE 2|Mar-2015**

Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org

# Art and Expression

**Smt, Shanthala B. Appa**
Asst.Lecturer in Dept, of Fine Arts
Godutai Doddappa Appa Arts & Commerce College for Women,
Kalaburagi-Karnataka.

## Abstract

*Art is Expression. Take any movement, shape, sound, colour it is expressive. It may be physical, psychological, physiological, ethical, intellectual or aesthetic. A strike is an*

*expression of discontent. The cry of a child or an animal, the changes of a Salamander, are expressions A lady's face is expressive, her looks &smile are expressive, so her dress, when she sings, she paints, she is expressive too. Everyone employs some medium or other in expressing. It may be one's own body as in dance or acting, it may be colour in painting, and it may be the sound of stringed instruments. One cannot evoke a meaning in others unless one has been first able to evoke that meaning in oneself.*

## Introduction

Expression is something immediately sensed a sensation. It is also spoken of as an emotion like sadness, happiness, disgust, terror, grief, depression. Through creative expression, young people hone their ability communicates, acquire cultural literacy, gain industry knowledge, and, most importantly, develop their voice as community leaders. Art isn't just sketching drawing and painting. No, it's much more than that. Art is writing, poetry, acting, singing, dancing; art is anything. Art is what you want it to be. Art is like beauty, it lies in the eye of the beholder. Art is not an object, it is not a person, it is not an idea. It is much more than that. Art is an imaginary container, flexible enough to fit any category and fits the smallest, most specific focus at the same time.

It is seen by everyone in a different way. You ask an artist what art is, they will say art is anything. Art is anything. Art is a beauty and ugly at the same time. To one person, art is beautiful, and to another, it is repulsive. But that is because we are human. Humans see everything differently because every person has a different personality. Humans are flawed. Therefore, our views on art are flawed. Art is flawed. But, at the same time, art is perfect.

Again, art is anything. It is alive, it is dead, it never possessed life in the first place. It is manmade, it is artificial, it is natural, it is real. Any shape or form, it is art. The world, the universe, anything. It is impossible to grasp. Think about it, millions of people living on this planet. Billions, even. It is not a concept you can understand, no matter how hard you try .I don't even know how many people live on Earth, but each and every one of them sees art differently.

And try understanding that! 6 billion people! More, actually. Even the sheer number of our species is art. See, the fact of the matter is, art is inconceivable. It's like a dream you can't control, or a toy just out of a child's grasp. Art is like life. There is no true meaning; there is no definition, no matter how hard scientists try.

Art is the freedom of expression. If you can't get your opinion through writing, because it may influence others, then you can paint it. Or, if you can't get your emotions out with words, a chord on the guitar may just do it. Maybe it isn't even you who's doing the art. Maybe you let it all out by watching a movie, or reading a book, or listening to music, or even going out and looking at the world. Maybe it's traveling that will let you accept the world for how it is. Just seeing the world in its true, raw, and unchanged form lets you know there are some things in life you can't control or avoid.

And maybe that's just it. Maybe art is so simple, that we can't wrap our heads around it. Because everything in life is so convoluted, (or at least that's just what it's like when we humans are done with it) then so is art. But life isn't complicated. Therefore, neither is art. We just think it is. And that's another part of our expression through art.

Most of us will never learn that life isn't as complicated as we think it is, and just by thinking it is, we make it complicated. That's when art comes in. When we express ourselves, when we put all our energy into art, the world melts away, and all there is, is just us; us and our art, which is just another part of us. So, then, when we are expressing ourselves, we are living in the moment: another aspect of art.

## Conclusion

living in the moment is the truest, purest form of life and art. When you live in the moment, you are your true self. This ties back to art because when you are expressing your self, you and only you goes into what you are doing. The most common time people live in the moment is during sports. You will only live in the moment if you are doing a sport you love, however.If you're playing soccer, and absolutely love soccer (again, not saying you do), all you'll be thinking about is soccer.

So, through love, comes art. Art can be connected to anything. It is like a maze that leads

to nowhere in particular, never stops being created, never stops being added on to, but always comes right back to art. Again, art is anything. We could go on and on, talking about the different forms of art.

Art can’t be specified, can’t be classified, can’t be measured, can’t be grasped, it can’t be understood. But, then again, it can’t be generalized .Art is anything, art is in the eye of the beholder. ART is EXPRESSION

**ISSN 2454-7255** **Original Article** **VOL 5|ISSUE 2|Mar-2015**

Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org

# ಗಣಕಯಂತ್ರ ಮತ್ತು ಅಂತರ್ಜಾಲ

ಶ್ರೀಮತಿ ಶಶಿಕಲಾ ಪುರವಂತ
ಗ್ರಂಥಪಾಲಕರು
ಗೋದೂತಾಯಿ ದೊಡ್ಡಪ್ಪ ಅಪ್ಪ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ ಗುಲ್ಬರ್ಗಾ

**ಪೀಠಿಕೆ:-**

ಮಾನವನು ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಅವನು ಯಾವಾಗಲೂ ಹೊಸ ಹೊಸ ಸಂಶೋಧನೆಗಳಲ್ಲಿ ತೊಡಗಿರುತ್ತಾನೆ. ಈ ಹೊಸ ಸಂಶೋಧನೆಗಳ ಫಲವಾಗಿ ಅನೇಕ ವಿದ್ಯುನ್ಮಾನ ಉಪಕರಣಗಳನ್ನು ಸೃಷ್ಟೀಸಿದ್ದಾನೆ. ಅವುಗಳಲ್ಲಿ ಗಣಕಯಂತ್ರವೂ ಒಂದು. ಗಣಕಯಂತ್ರವು ಗಣಿತದ ಒಂದು ಕೂಸು. ಏಕೆಂದರೆ, ಗಣಕಯಂತ್ರದ ಸೃಷ್ಟಿ ಮತ್ತು ಬೆಳವಣಿಗೆಯಲ್ಲಿ ಗಣಿತಶಾಸ್ತ್ರ ಹಾಗೂ ಗಣಿತಜ್ಞರ ಪಾತ್ರ ಬಹು ಮಹತ್ತರವಾದುದು. ಗಣಕಯಂತ್ರದ ಮಹತ್ವ ಬಹು ಅಪಾರವಾದುದು. ದಿನೇ ದಿನೇ ಇದರ ವ್ಯಾಪ್ತಿ ಹೆಚ್ಚು ವಿಶಾಲವಾಗುತ್ತಿದೆ. ಇದೊಂದು ಆಧುನಿಕ ಜಗತ್ತಿನ ಅದ್ಭುತ ಸೃಷ್ಟಿಯಾಗಿದ್ದು, ಮಾನವ ಜೀವಿಯ ಪ್ರತಿಯೊಂದು ಚಟುವಟಿಕೆಯಲ್ಲಿಯೂ ಕಾರ್ಯನಿರ್ವಹಿಸುತ್ತಿದೆ. ಇಂದಿನ ದಿನಮಾನಗಳಲ್ಲಿ ಗಣಕಯಂತ್ರವು ಬಹಳ ಕ್ರಿಯಾಶೀಲವಾದ, ಮಹತ್ತರವಾದ ಕ್ರಾಂತಿಯನ್ನೇ ಎಬ್ಬಿಸಿದೆ. ಇಂದಿನ ದಿನಮಾನವು ಬಹುತೇಕ ಗಣಕೀಕರಣವಾಗಿ ಬಿಟ್ಟಿದೆ.

ನಾವು ಇಂದು ಗಣಕಯಂತ್ರ ಯುಗದಲ್ಲಿದ್ದೇವೆ. ಅಂದರೆ ಗಣಕಯಂತ್ರ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಏಕೆಂದರೆ, ಈ ಆಧುನಿಕ ಜಗತ್ತಿನಲ್ಲಿ ಗಣಕಯಂತ್ರಗಳನ್ನು ಬಳಸದ ಕ್ಷೇತ್ರಗಳಿಲ್ಲ. ಶಿಕ್ಷಣ ಕ್ಷೇತ್ರ, ತಾಂತ್ರಿಕಕ್ಷೇತ್ರ, ವೈಜ್ಞಾನಿಕಕ್ಷೇತ್ರ, ಔದ್ಯೋಗಿಕಕ್ಷೇತ್ರ, ವೈದ್ಯಕೀಯಕ್ಷೇತ್ರ, ಸಂಶೋಧನಾ ಕ್ಷೇತ್ರ, ಸಾರಿಗೆಕ್ಷೇತ್ರ, ಮನೋರಂಜನಾ ಕ್ಷೇತ್ರ, ಕೃಷಿ ಕ್ಷೇತ್ರ, ಬಾಹ್ಯಾಕಾಶ ಕ್ಷೇತ್ರ, ಈ ಮುಂತಾದ ಕ್ಷೇತ್ರಗಳಲ್ಲಿ ಇದು ಮಹತ್ವಪೂರ್ಣವಾದ ಸಂಪನ್ಮೂಲ ವಿದ್ಯುನ್ಮಾನ ಸಾಧನವಾಗಿದೆ.

ವಿಶ್ವಾದಾದ್ಯಂತ ಹರಡಿರುವ ಕಂಪ್ಯೂಟರ ನೆಟವರ್ಕಗಳ ನೆಟವರ್ಕಗೆ ಇಂಟರನೆಟ್ ಎನ್ನುತ್ತಾರೆ. ನಿಮ್ಮ ಶಾಲೆಯ ಪ್ರಾಥಮಿಕ ವಿಭಾಗದ ಕಂಪ್ಯೂಟರ್ ನೆಟವರ್ಕಗೆ ಮಾಧ್ಯಮಿಕ ವಿಭಾಗದ ನೆಟವರ್ಕನ್ನು ಜೋಡಿಸಲಾಗಿದೆ ಎಂದುಕೊಳ್ಳಿ, ಇವೆರಡು ನೆಟವರ್ಕಗಳು ಬೇರೆ ಬೇರೆ ಸ್ಥಳಗಳಿಂದ ಜೋಡಿಸಲಾಗಿದ್ದು, ನೀವು ಒಂದು ಕಂಪ್ಯೂಟರ ಜಾಲದಿಂದ ಇನ್ನೊಂದು ಜಾಲಕ್ಕೆ ಮಾಹಿತಿ ಕಳುಹಿಸಬಹುದೆಂದು ಊಹಿಸಿ. ಹಾಗೆಯೇ ಹಲವಾರು ಜಾಲಗಳನ್ನು ಒಟ್ಟಿಗೆ ಜೋಡಿಸಿದರೆ, ಒಂದು ಬೃಹತ ಜಾಲ ಉಂಟಾಗುತ್ತದೆ. ಇಂಟರನೆಟ ಲಕ್ಷಾಂತರ ಕಂಪ್ಯೂಟರಗಳನ್ನು ವಿಶ್ವದಾದ್ಯಂತ ಜೋಡಿಸಿ, ಅದರಿಂದ ಬೇರೆ ಬೇರೆ ಸ್ಥಳಗಳಿಂದ ಒಬ್ಬರಿಂದೊಬ್ಬರಿಗೆ ಸಂಪರ್ಕ ಒದಗಿಸುತ್ತದೆ.

## ಗಣಕಯಂತ್ರದ ಅರ್ಥ ಮತ್ತು ವ್ಯಾಖ್ಯೆ:-

ಸಾಮಾನ್ಯವಾಗಿ ಗಣಕಯಂತ್ರವನ್ನು ಒಂದೇ ವಾಕ್ಯದಲ್ಲಿ ವಿದ್ಯುನ್ಮಾನ ಉಪಕರಣ ಎಂದೂ ಲೆಕ್ಕಾಚಾರ ಮಾಡುವ ಯಂತ್ರ ಎಂದೂ ಕರೆಯಬಹುದು. ಅದು ಕೊಟ್ಟಂತಹ ದತ್ತಾಂಶಗಳಿಗೆ ಅರ್ಥಪೂರ್ಣ ಮಾಹಿತಿಗಳನ್ನು ಒದಗಿಸುತ್ತದೆ. ಇಲ್ಲಿ ಕಂಪ್ಯೂಟ ಎಂದರೆ ಲೆಕ್ಕಾಚಾರ ಮಾಡುವುದು ಎಂದು ಅರ್ಥ. ಲೆಕ್ಕಾಚಾರ ಮಾಡುವ ಯಂತ್ರವೇ ಗಣಕಯಂತ್ರ.

**ಗಣಕಯಂತ್ರದ ವ್ಯಾಖ್ಯೆಗಳು:-**

1) ಗಣಕ ಯಂತ್ರವೆಂದರೆ ಒಂದು ಯಂತ್ರರೂಪ ಮತ್ತು ಕ್ರಿಯಾರೂಪಗಳ ಒಟ್ಟು ಮೊತ್ತವಾಗಿದೆ.
2) ಗಣಕ ಯಂತ್ರವು ದತ್ತಾಂಶಗಳನ್ನು ಸಂಸ್ಕರಿಸಬಲ್ಲ ಒಂದು ವಿದ್ಯುನ್ಮಾನ ಯಂತ್ರವಾಗಿದೆ.

## ಗಣಕಯಂತ್ರದ ಇತಿಹಾಸ:-

ಮಾನವನ ಸಾಮಾಜಿಕ ಜೀವನ ಪ್ರಾರಂಭವಾದಾಗ ಬಹುಶಃ ಅವನ ಮೊದಲ ಬೌದ್ಧಿಕ ಚಟುವಟಿಕೆಯೆಂದರೆ ಎಣಿಕೆ. ಈ ಎಣಿಕೆಯಿಂದ ಲೆಕ್ಕಾಚಾರವು ಪ್ರಾರಂಭವಾಯಿತು. ಮಾನವನು ಎಣಿಕೆ ಮಾಡಲು ಹರಳುಗಳನ್ನು, ಸಣ್ಣ ಸಣ್ಣ ಕಡ್ಡಿಗಳನ್ನು ಮರದ ಬೀಜಗಳನ್ನು ಬಳಸುತ್ತಿದ್ದನು. ಅಲ್ಲದೆ, ನೆಲದ ಮೇಲೆ ಕಡ್ಡಿಯಿಂದ ಗೀರುಗಳನ್ನು ಎಳೆಯುವುದರ ಮೂಲಕ ಲೆಕ್ಕಾಚಾರವನ್ನು ಮಾಡುತ್ತಿದ್ದನು. ತನ್ನ ಕೈ ಬೆರಳುಗಳನ್ನು ಸಹ ಎಣಿಕೆ ಮಾಡಲು ಬಳಸುತ್ತಿದ್ದನು. ಮುಂದೆ ನಾಗರಿಕತೆಯು ಬೆಳೆದಂತೆ ಎಣಿಕೆ ಮಾಡಲು ಮಣಿ ಚೌಕಟ್ಟು ಬಳಕೆಗೆ ಬಂದಿತು. ಹೀಗೆ ಬದಲಾಗುತ್ತಿರುವ ನಾಗರಿಕತೆಯಿಂದ ಗಣಕಯಂತ್ರದ ಇತಿಹಾಸದಲ್ಲಿ ಪ್ರಗತಿ ಪ್ರಾರಂಭವಾಯಿತು. ಈ ಕೆಳಗಿನ ಅಂಶಗಳಿಂದ ಗಣಕಯಂತ್ರದ ಇತಿಹಾಸವನ್ನು ತಿಳಿಯಬಹುದು.

## 1) ಮಣಿಚೌಕಟ್ಟು:-

ಮಣಿಕಟ್ಟು ಮೊಟ್ಟ ಮೊದಲ ಎಣಿಕೆಯ ಸಾಧನವಾಗಿದ್ದು, ಇದನ್ನು ಕ್ರಿ.ಪೂ. 600 ವರ್ಷಗಳ ಹಿಂದೆ ಚೀನಾದವರು ಕಂಡು ಹಿಡಿದಿದ್ದರು. ಈ ಎಣಿಕೆ ಸಾಧನ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವದು ಅದರ ಮೂಲ ಮೌಲ್ಯದ

ಸಮರ್ಥನೆಯಾಗಿದೆ. ಮಣಿಚೌಕಟ್ಟನ್ನು ಬಳಸಿ ಅಂಕಗಣಿತೀಯ ಕ್ರಿಯೆಗಳಾದ ಸಂಕಲನ, ವ್ಯವಕಲನ, ಗುಣಾಕಾರ,ಭಾಗಾಕಾರ ಕ್ರಿಯೆಗಳನ್ನು ಮಾಡಬಹುದು. ಆಶ್ಚರ್ಯವೆಂದರೆ ಇಂದಿಗೂ ಸಹ ಇವುಗಳನ್ನು ರಷಿಯಾ, ಜಪಾನ, ಚೀನಾ, ಭಾರತ ಮುಂತಾದ ದೇಶಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಬಳಸುತ್ತಿದ್ದಾರೆ.

## 2) ನೇಪಿಯರನ ಎಲುಬುಗಳು:-

ಸ್ಕಾಟಲ್ಯಾಂಡಿನ ಗಣಿತಜ್ಞ ಜಾನ ನೇಪಿಯರ ಎಂಬುವನು ಕ್ರಿ.ಶ.1614 ರಲ್ಲಿ ಗಣಿತದ ಗುಣಾಕಾರ ಕ್ರಿಯೆಗಳನ್ನು ಮಾಡಲು ಕೆಲವು ಆಯತ ಘನಾಕೃತಿಯ ಎಲುಬುಗಳನ್ನು ಬಳಸಿದನು. ನಾಲ್ಕು ಮುಖಗಳನ್ನು ಹೊಂದಿದ ಈ ಪ್ರತಿಯೊಂದು ಎಲುಬಿನ ಒಂದೊಂದು ಮುಖದ ಮೇಲೆ ಅಂಕಿಗಳನ್ನು ಕೆತ್ತಲಾಗಿತ್ತಂತೆ. ಹೀಗೆ ಕೆತ್ತಲಾದ ಸಂಖ್ಯೆಗಳುಳ್ಳ ಎಲುಬುಗಳನ್ನು ಅಕ್ಕಪಕ್ಕದಲ್ಲಿಟ್ಟಾಗ ಗಣಿತದ ಗುಣಾಕಾರ ಲೆಕ್ಕವೊಂದು ನಡೆದು ಬಿಡುತ್ತಿತ್ತು. ಈ ರೀತಿಯ ಲೆಕ್ಕಾಚಾರಕ್ಕಾಗಿ ಅವನು ಹನ್ನೊಂದು ಎಲುಬುಗಳನ್ನು ಬಳಸುತ್ತಿದ್ದನು. ಇವುಗಳೇ ನೇಪಿಯರ ಎಲುಬುಗಳು.

## 3) ಬ್ಲೇಸ ಪಾಸ್ಕಲನ ಯಾಂತ್ರಿಕ ಕಲನಾಯಂತ್ರ:-

ಕ್ರಿ.ಶ. 1642 ರಲ್ಲಿ ಫ್ರೆಂಚ ಗಣಿತಜ್ಞ ಹಾಗೂ ತತ್ವಶಾಸ್ತ್ರಜ್ಞನಾದ ಬ್ಲೇಸ ಪಾಸ್ಕಲನು ಸಂಕಲನ ಹಾಗೂ ವ್ಯವಕಲನ ಮಾಡುವ ಮೊದಲ ಯಾಂತ್ರಿಕ ಕಲನ ಯಂತ್ರವನ್ನು ಕಂಡುಹಿಡಿದನು. ಪಾಸ್ಕಲನು ಈ ಯಂತ್ರವನ್ನು ತನ್ನ 18 ನೇ ವಯಸ್ಸಿನಲ್ಲಿ ತನ್ನ ತಂದೆಯ ಉದ್ದಿಮೆಯಲ್ಲಿನ ವ್ಯವಹಾರದ ಲೆಕ್ಕಾಚಾರ ಮಾಡಲು ಕಂಡುಹಿಡಿದನು. ಈ ಕಲನಯಂತ್ರವು ಗೇರು,ಚಕ್ರ, ಮತ್ತು ತಿರತಗಣಿಗಳನ್ನು ಒಳಗೊಂಡಿದ್ದು ಪ್ರತಿ ಗಾಲಿಯು 10 ಭಾಗಗಳನ್ನು ಹೊಂದಿದೆ. ಬಲಬದಿಯ ಒಮದು ಚಕ್ರಪೂರ್ಣ ಸುತ್ತು ಸುತ್ತಿದ್ದರೆ. ಅದರ ಪಕ್ಕದ ಗಾಲಿ 1/10 ಭಾಗ ಚಲಿಸುವುದು. ಇದು ದಶಮಾಂಶ ಸಂಖ್ಯಾ ಪದ್ಧತಿಯಿಂದ ಸಂಕಲನ ಹಾಗೂ ವ್ಯವಕಲನ ಲೆಕ್ಕವನ್ನು ಮಾಡುತ್ತಿತ್ತು.

## 4) ಲೇಬ್ನೀಜನ ಯಾಂತ್ರಿಕ ಕಲನಾಯಂತ್ರ:-

ಕ್ರಿ.ಶ. 1671 ರಲ್ಲಿ ಜರ್ಮನಿಯ ಗಾಟಫ್ರೈಡ ಲೇಬ್ನೀಜನು ಪಾಸ್ಕಲನ ಕಲನಾಯಂತ್ರವನ್ನು ಸುಧಾರಿಸಿದನು. ಗೇರುಗಳ ತೊಂದರೆಯನ್ನು ನಿವಾರಿಸಲು ದಂತವುಳ್ಳ ಗಾಲಿಗಳನ್ನು ಬಳಸಿದನು. ಇದನ್ನು ಬಳಸಿ ನೇರವಾಗಿ ಗುಣಾಕಾರ ಮತ್ತು ಭಾಗಾಕಾರ ಕ್ರಿಯೆಗಳನ್ನು ಮಾಡಬಹುದಾಗಿತ್ತು.

## 5) ಜೋಸೆಫ ಜಾಕರ್ಡನ ಮಗ್ಗದ ರಟ್ಟುಗಳು:-

ಕ್ರಿ.ಶ.1802 ರಲ್ಲಿ ಫ್ರಾನ್ಸದ ಜೋಸೆಫ ಮಾರಿ ಜಾರ್ಕಡನು ತನ್ನ ಜವಳಿ ಉದ್ದಿಮೆಯಲ್ಲಿ ಸ್ವಯಂಚಾಲಿತ ಮಗ್ಗದಲ್ಲಿ ರಂಧ್ರಿತ ರಟ್ಟುಗಳನ್ನು ಬಳಸಿದನು. ಈ ಮಗ್ಗದಲ್ಲಿ ಕೆಲದರ್ಜೆಯ ದಾರಗಳನ್ನು ಅಥವಾ ಸಳಿಗಳನ್ನು ಎತ್ತರಿಸಿ ಕೆಲಸ ಮಾಡುವುದರ ಸಲುವಾಗಿ ರಟ್ಟಿನಲ್ಲಿ ರಂಧ್ರಗಳನ್ನು ಮಾಡಿ ಬಳಸಿದನು. ಈ ರಟ್ಟುಗಳಲ್ಲಿ ಒಂದು ವಿಶಿಷ್ಟ ಕ್ರಮಬದ್ಧತೆ ಇರುತ್ತಿತ್ತು. ಅವನು ರಟ್ಟಿನ ಕ್ರಮಬದ್ಧತೆಗಳನ್ನು ಬದಲಾಯಿಸುವುದರ ಸಲುವಾಗಿ ವಿವಿಧ ನಮೂನೆಗಳನ್ನು ಪಡೆದನು.

## 6) ಚಾರ್ಲ್ಸ ಬ್ಯಾಬೇಜನ ವಿಭೇದನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಯಂತ್ರ :-

ಕೇಂಬ್ರಿಡ್ಜ ವಿಶ್ವವಿದ್ಯಾಲಯದಲ್ಲಿ ಗಣಿತದ ಪ್ರಾಧ್ಯಾಪಕರಾಗಿದ್ದ ಚಾರ್ಲ್ಸ್ ಬ್ಯಾಬೇಜ ಎಂಬುವರು ಕ್ರಿ.ಶ. 1822 ರಲ್ಲಿ ವಿಭೇದನಾತ್ಮಕ ಯಂತ್ರವನ್ನು ಕಂಡುಹಿಡಿದರು. ಅದು ಗಣತೀಯ ಕ್ರಿಯೆಗಳ ನಿಖರವಾದ ಮೌಲ್ಯವನ್ನು ಕಂಡು ಹಿಡಿಯುತ್ತಿತ್ತು. ಅದು 20 ದಶಮಾಂಶ ಸ್ಥಳಗಳವರೆಗಿನ ಲೆಕ್ಕಗಳನ್ನು ನಿಖರವಾಗಿ ಮಾಡುತ್ತಿತ್ತು. ಚಾರ್ಲ್ಸ್ ಬ್ಯಾಬೇಜನು ಮುಂದೆ ಕ್ರಿ.ಶ. 1833 ರಲ್ಲಿ ವಿಭೇದನಾತ್ಮಕ ಯಂತ್ರದಲ್ಲಿ ಗುರುತರವಾದ ಸುಧಾರಣೆ ಮಾಡಿ ವಿಶ್ಲೇಷಣಾತ್ಮಕ ಯಂತ್ರವನ್ನು ಕಂಡುಹಿಡಿದನು. ಈ ಯಂತ್ರವು ನಿಮಿಷಕ್ಕೆ 60 ಸಂಕಲನ ಮಾಡುತ್ತಿತ್ತು. ಈ ಯಂತ್ರವು 5 ಪ್ರಮುಖ ಘಟಕಗಳನ್ನು ಹೊಂದಿತ್ತು. ಅವುಗಳೆಂದರೆ, ಆಗಮಘಟಕ, ನಿರ್ಗಮ ಘಟಕ, ಸಂಗ್ರಹ ಘಟಕ, ಅಂಕಗಣತೀಯ ಘಟಕ, ನಿಯಂತ್ರಣ ಘಟಕ ಈ 5 ಘಟಕಗಳು ಮುಂದೆ ಆಧುನಿಕ ಕಂಪ್ಯೂಟರನ ರಚನೆಗೂ ದಾರಿ ಮಾಡಿಕೊಟ್ಟವು.ಹೀಗಾಗಿ ಆಧುನಿಕವೆನಿಸುವ ಕಂಪ್ಯೂಟರನ ಭಾಗಗಳನ್ನು ಹೋಲುವ

ಘಟಕಗಳುಳ್ಳ ಕಂಪ್ಯೂಟರನ್ನು ತಯಾರಿಸಿದ್ದಕ್ಕಾಗಿ ಚಾರ್ಲಸ ಬ್ಯಾಬೇಜರನ್ನು ಕಂಪ್ಯೂಟರಿನ ಪಿತಾಮಹ ಆಧುನಿಕ ಕಂಪ್ಯೂಟರಿನ ಜನಕ ಎಂದು ಕರೆಯುತ್ತಾರೆ.

### 7) ಹರ್ಮನ ಹಾಲರಿಥನ ವಿಶ್ಲೇಷಣಾತ್ಮಕ ಯಂತ್ರ:-

ಅಮೇರಿಕೆಯ ಜನಗಣತಿ ಕಾರ್ಯಾಲಯದ ಅಧಿಕಾರಿ ಹರ್ಮನ ಹಾಲರಿಥ ಎಂಬುವನು ರಂಧ್ರಿತ ರಟ್ಟನ್ನು ಬಳಸಿ ದತ್ತಾಂಶ ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಯಂತ್ರವನ್ನು ಕಂಡುಹಿಡಿದನು. ಜನಗಣತಿ

ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿರುವಾಗ ಆ ಸಮಯದಲ್ಲಿ ತೀವ್ರವಾಗಿ ಜನಗಣತಿ ಮಾಡುವ ಒಂದು ಯಂತ್ರದ ಅವಶ್ಯಕತೆ ಇತ್ತು. ಅದಕ್ಕಾಗಿ ಹರ್ಮನ ವಿಶ್ಲೇಷಣಾತ್ಮಕ ಯಂತ್ರ ಕಂಡುಹಿಡಿದನು. ಇದು ನಿಮಿಷಕ್ಕೆ 60-70 ರಷ್ಟು ದತ್ತಾಂಶಗಳನ್ನು ಓದಿ ವಿಶ್ಲೇಷಣೆ ಮಾಡಿ ಕೇವಲ 6 ವಾರಗಳಲ್ಲಿ ಜನಗಣತಿಯನ್ನು ಮುಗಿಸಿತು.

### 8) ಹೋವಾರ್ಡ ಏಕನನ್ ಐಬಿಎಮ ಮಾರ್ಕ-1:-

ಹಾರ್ವರ್ಡ ವಿಶ್ವವಿದ್ಯಾಲಯದ ಹೋವಾರ್ಡ ಏಕನ್ನ ಮತ್ತು ಗ್ರೇಸ ಹಾಪರ ಎಂಬುವರು ಐಬಿಎಮ ಕಂಪನಿಯ ಸಹಯೋಗದಿಂದ ಕ್ರಿ.ಶ. 1930 ರಲ್ಲಿ ಸಾಮಾನ್ಯ ಉದ್ದೇಶಿತ ಗಣಕಯಂತ್ರವನ್ನು ಕಂಡು ಹಿಡಿಯಲು ಪ್ರಾರಂಭಿಸಿದರು. ಇದು ಹದಿನೈದು ಮೀಟರ ಉದ್ದದ ಜಾಗವನ್ನು ಆಕ್ರಮಿಸಿಕೊಳ್ಳುತ್ತಿತ್ತು. ಮತ್ತು ಇದಕ್ಕೆ ಉಪಯೋಗಿಸಿದ ವೈಯರುಗಳು 800 ಕಿ.ಮೀ ಉದ್ದವಾಗಿದ್ದವು. ಹಾಗೂ ಇದು ಸಾವಿರಾರು ವಿದ್ಯುತ್ ಆಯಸ್ಕಾಂತೀಯ ಪ್ರವಹನ ನಳಿಕೆಗಳನ್ನು ಹೊಂದಿತ್ತು. ಇದು 1948 ರಲ್ಲಿ ಪ್ರಾರಂಭವಾಗಿ ಕ್ರಿ.ಶ.1959 ರ ವರೆಗೆ ಇತ್ತು. ಇದು 2-20 ಅಂಕಿಗಳನ್ನು 5 ಸೆಕೆಂಡುಗಳಲ್ಲಿ ಗುಣಿಸಬಲ್ಲದಾಗಿತ್ತು. ಹಿಂದಿನ ಯಂತ್ರಗಳಿಗಿಂತ ವೇಗವಾಗಿ ಕಾರ್ಯ ಮಾಡುತ್ತಿತ್ತು.

### 9) ಇನ್ಯೆಕಾ:-

ಕ್ರಿ.ಶ.1946 ರಲ್ಲಿ ಅಮೇರಿಕಾದ ಪೆನ್ಸಲ್ವೇನಿಯಾ ವಿಶ್ವವಿದ್ಯಾಲಯದ ಜೆ.ಪಿ.ಎಕರ್ಟ ಹಾಗೂ ಜೆ.ಡಬ್ಲ್ಯೂ ಮ್ಯಾಂಚ್ಲೆ ಎಂಬುವರು ಇನ್ಯೆಕಾ ವಿದ್ಯುನ್ಮಾನ ಯಂತ್ರವನ್ನು ಕಂಡುಹಿಡಿದರು. ಇದು ಅತ್ಯಂತ ವೇಗವಾದ ಯಂತ್ರವಾಗಿತ್ತು. ಒಂದು ಸೆಕೆಂಡಿನಲ್ಲಿ 5000 ಸಂಕಲನ ಅಥವಾ 350 ಗುಣಾಕಾರ ಲೆಕ್ಕಗಳನ್ನು ಮಾಡುತ್ತಿತ್ತು. ಇದು 18000 ನಿರ್ವಾತ ನಳಿಕೆಗಳನ್ನು 70,000 ರೆಸಿಸ್ಟರಗಳನ್ನು 10.000 ಕೆಪ್ಯಾಸಿಟರಗಳನ್ನು 60000 ಸ್ವಿಚಗಳನ್ನು ಹೊಂದಿದ್ದು 27 ಟನ್ ಭಾರ ಹೊಂದಿತ್ತು.

### ಗಣಕಯಂತ್ರದ ವಿಕಾಸ:-

ಗಣಕಯಂತ್ರದ ವಿಕಾಸದ ವರ್ಗಿಕರಣವನ್ನು ವಿವಿಧ ತಲೆಮಾರುಗಳಲ್ಲಿ ಈ ಕೆಳಗಿನ ಅಂಶಗಳ ಆಧಾರದ ಮೇಲೆ ಮಾಡಲಾಗಿದೆ.

1) ತಂತ್ರಶಾಸ್ತ್ರ ಗಣಕಯಂತ್ರ ತಯಾರಿಕೆಯಲ್ಲಿ ಬಳಸುವಂತದು.
2) ವೇಗ ಕನಿಷ್ಟ 10 ಪಟ್ಟು ಹೆಚ್ಚಿನ ವೇಗ ಹೊಂದಿರುವಂತದು.
3) ಸಂಗ್ರಹ ಸಾಮರ್ಥ್ಯದಲ್ಲಿ ಕ್ಷಿಪ್ರ ಬದಲಾವಣೆ.
4) ಗಾತ್ರದಲ್ಲಿ ಅತೀ ಚಿಕ್ಕದಾಗಿರುವಂತದು.
5) ವ್ಯವಸ್ಥೆ ಬೆಲೆ ಸುಮಾರು 2-3 ಪಟ್ಟು ಕಡಿಮೆಯಾಗಿರುವಂತದು.
6) ಕಾರ್ಯಶೀಲತೆ ಮತ್ತು ಕಾರ್ಯತತ್ಪರತೆಯಲ್ಲಿ ಹೆಚ್ಚಳವಾಗಿರುವಂತಹದು.

ಈ ಮೇಲಿನ ಅಂಶಗಳಲ್ಲಿಯ ತೀವ್ರ ವಿಕಸನದ ಕ್ರಾಂತಿಯಿಂದ ಗಣಕಯಂತ್ರದ ವಿಕಾಸ ಅಥವಾ ಅಭಿವೃದ್ದಿಯನ್ನು ಮುಖ್ಯವಾಗಿ 5 ತಲೆಮಾರುಗಳಲ್ಲಿ ವರ್ಗೀಕರಿಸಬಹುದು. ಅವುಗಳು-

1) ಮೊದಲನೆಯ ತಲೆಮಾರಿನ ಗಣಕಯಂತ್ರಗಳು ಕ್ರಿ.ಶ 1946-1955
2) ಎರಡನೆಯ ತಲೆಮಾರಿನ ಗಣಕಯಂತ್ರಗಳು ಕ್ರಿ.ಶ 1956-1965

3) ಮೂರನೆಯ ತಲೆಮಾರಿನ ಗಣಯಂತ್ರಗಳು ಕ್ರಿ.ಶ 1966-1975
4) ನಾಲ್ಕನೆಯ ತಲೆಮಾರಿನ ಗಣಕಯಂತ್ರಗಳು ಕ್ರಿ.ಶ 1976- ಇಲ್ಲಿಯವರೆಗೆ.

**ಗಣಕಯಂತ್ರದ ಗುಣಲಕ್ಷಣಗಳು ಹಾಗೂ ಸಾಮರ್ಥ್ಯಗಳು:**

1) ವೇಗವಾದ ಕ್ರಿಯಾವಿಧಾನ
2) ಅಗಾಧ ಸಂಗ್ರಹ ಸಾಮರ್ಥ್ಯ
3) ನಿಖರತೆ
5) ಕಾರ್ಯತತ್ಪರತೆ
6) ಸ್ವಯಂ ಕಾರ್ಯಚಾಲನೆ
7) ತಾರ್ಕಿಕ ಕ್ರಿಯೆ
8) ಪುನರವರ್ತನ ಕ್ರಿಯೆ

## ಗಣಕಯಂತ್ರಗಳ ವರ್ಗೀಕರಣ:

ಗಣಕಯಂತ್ರಗಳಿಗೆ ನೀಡುವ ದತ್ತಾಂಶಗಳಿಗನುಗುಣವಾಗಿ, ದತ್ತಾಂಶಗಳನ್ನು ಸ್ವೀಕರಿಸುವ ಪ್ರಕ್ರಿಯೆಗೆ ಅನುಗುನವಾಗಿ, ಕ್ರಿಯಾತತ್ವಕ್ಕನುಗುಣವಾಗಿ ಗಣಕಯಂತ್ರಗಳಲ್ಲಿ ಮೂರು ವಿಧಗಳು. ಅವುಗಳು-

1) ಸಂಖ್ಯಾ ಗಣಕಯಂತ್ರ
2) ಸಾದೃಶ್ಯ ಗಣಕಯಂತ್ರ
3) ಮಿಶ್ರ ಗಣಕಯಂತ್ರ

ಗಣಕಯಂತ್ರದ ಗಾತ್ರ ಹಾಗೂ ಸ್ಮರಣಾ ಸಾಮರ್ಥ್ಯಕ್ಕೆ ಅನುಗುನವಾಗಿ ಅವುಗಳನ್ನು ಪುನಃ ನಾಲ್ಕು ವಿಧಗಳಾಗಿ ವರ್ಗೀಕರಿಸಬಹುದು. ಅವುಗಳು-

1) ಸೂಕ್ಷ್ಮ ಗಣಕಯಂತ್ರ
2) ಚಿಕ್ಕ ಗಣಕಯಂತ್ರ
3) ಪ್ರಧಾನ ಚೌಕ್ಕಟ್ಟಿನ ಗಣಕಯಂತ್ರ
4) ಬೃಹತ ಗಣಕಯಂತ್ರ

## ಆಗಮನಾಂಗ ಸಾಧನಗಳು:

ಸಾಮಾನ್ಯವಾಗಿ ದತ್ತಾಂಶಗಳನ್ನು ಹಾಗೂ ಮಾಹಿತಿಗಳನ್ನು ಸ್ವೀಕರಿಸುವ ಗಣಕಯಂತ್ರದ ಒಂದು ಪ್ರಮುಖ ಘಟಕವೇ ಆಗಮನಾಂಗ. ಆಗಮನಾಂಗವು ನಿರ್ವಹಣಾ ಕಾರ್ಯದಿಂದ ಹಾಗೂ ಇನಾವುದೇ ಮೂಲಗಳಿಂದ ನೀಡಲ್ಪಡುವ ದತ್ತಾಂಶಗಳನ್ನು ಹಾಗೂ ಮಾಹಿತಿಗಳನ್ನು ಸ್ವೀಕರಿಸಿ, ವಿಶ್ಲೇಷಿಸಿ ಗಣಕಯಂತ್ರದ ಪ್ರಧಾನ ಸ್ಮರಣಾಂಗಕ್ಕೆ ಕಳಿಸುತ್ತದೆ. ಗಣಕಯಂತ್ರಕ್ಕೆ ದತ್ತಾಂಶಗಳನ್ನು ನೀಡಲು ಹಲವಾರು ಆಗಮನಾಂಗ ಸಾಧನಗಳನ್ನು ಬಳಸುತ್ತೇವೆ. ಅವುಗಳು,

## ವಿವಿಧ ಆಗಮನಾಂಗ ಸಾಧನಗಳು:

1) ಬೆರಳಚ್ಚು ಫಲಕ
2) ಮೌಸ
3) ದೃಷ್ಠಿ ವಿಚ್ಛೇದಕ ಸಲಕರಣೆಗಳು
4) ಕಾಂತೀಯ ಶಾಹಿ ಸಂಜ್ಞಾವಾಚಕಗಳು
5) ಜಾಯಸ್ಟಿಕ
6) ಲೈಟ್ ಪೆನ್
7) ಟ್ರ್ಯಾಕ್ ಬಾಲ್

8) ಡಿಜಿಟಲ್ ಕ್ಯಾಮೆರಾ
9) ಬಾಹ್ಯ ಸಂಗ್ರಹಣಾ ಸಾಧನಗಳು

- ಫ್ಲಾಪಿ ತಟ್ಟೆ
- ಕಠಿಣ ತಟ್ಟೆ
- ಸಿ.ಡಿ.ರೋಮ್
- ಕಾಂತೀಯ ಸುರುಳಿ

**ನಿರ್ಗಮನಾಂಗ ಸಾಧನಗಳು:**

ನಿರ್ಗಮನಾಂಗದ ಅರ್ಥ:

ಆಗಮನಾಂಗದಿಂದ ಪಡೆದಂತಹ ದತ್ತಾಂಶಗಳನ್ನು ಕೇಂದ್ರಿಯ ಸಂಸ್ಕರಣಾಂಗವು ಸಂಸ್ಕರಿಸಿ, ಸಂಸ್ಕರಿಸಿದ ದತ್ತಾಂಶಗಳನ್ನು ಸ್ಮರಣಾಂಗಕ್ಕೆ ಕಳಿಸುತ್ತದೆ. ನಿಯಂತ್ರಣದ ನಿರ್ದೇಶಕ್ಕನುಗುಣವಾಗಿ ಸ್ಮರಣಾಂಗವು ಫಲಿತಾಂಶವನ್ನು ಬಳಕೆದಾರನ ಭಾಷೆಯಲ್ಲಿ ಗಣಕಯಂತ್ರ ವ್ಯವಸ್ಥೆಯ ಒಂದು ಸಹ ವಿಭಾಗದಲ್ಲಿ ಪ್ರಕಟಿಸಿತ್ತದೆ. ಆ ಸಹ ವಿಭಾಗವೇ ನಿರ್ಗಮನಾಂಗ.

**ವಿವಿಧ ನಿರ್ಗಮನಾಂಗ ಸಾಧನಗಳು:**

1) ದರ್ಶಕ
2) ಮುದ್ರಕ
3) ಚಿತ್ರಾಲೇಖ್ಯಕ
4) ಸ್ಪೀಕರಗಳು
5) ಪ್ರಕ್ಷೇಪಕಗಳು
6) ಬಾಹ್ಯ ಸಂಗ್ರಹಣಾ ಸಾಧನಗಳು

- ರಂಧ್ರತ ರಟ್ಟು
- ಕಾಂತೀಯ ತಟ್ಟೆ
- ಸಿಡಿ ರೋಮ

**ಗಣಕಯಂತ್ರದ ಪ್ರಯೋಜನಗಳು:**

1) ಶಿಕ್ಷಣ ಕ್ಷೇತ್ರದಲ್ಲಿಯ ಜ್ಞಾನ ಪ್ರಸಾರಕ್ಕಾಗಿ ಹಾಗೂ ಶಿಕ್ಷಣ ಪ್ರಕ್ರಿಯಗಳನ್ನು ಅಭಿವೃದ್ಧಿಪಡಿಸಲು ಗಣಕಯಂತ್ರಗಳನ್ನು ಬಳಸಲಾಗುತ್ತಿದೆ. ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಗಣಕಯಂತ್ರವನ್ನು ಅತಿ ಹೆಚ್ಚಾಗಿ ಉಪಯೋಗಿಸಬಹುದು.

2) ಔದ್ಯೋಗಿಕ ಕ್ಷೇತ್ರಗಳಲ್ಲಿ ಯಂತ್ರಗಳ ನಿಯಂತ್ರಣಕ್ಕಾಗಿ, ವಸ್ತುಗಳವಿನ್ಯಾಸ,ರಚನೆ,ಮಾದರಿ ತಯಾರಿಕೆ,ಗುಣಮಟ್ಟ ಹಾಗೂ ವಸ್ತುಗಳ ಪರೀಕ್ಷಣೆಗೆ, ಯಂತ್ರಗಳ ದೋಷಗಳನ್ನು ಪತ್ತೆ ಹಚ್ಚಲಿಕ್ಕೆ, ಯಂತ್ರಗಳು ನಿಗದಿತ ಕಾರ್ಯ ಕೈಗೊಳ್ಳಲಿಕೆ ಗಣಕಯಂತ್ರವನ್ನು ಬಳಸುವರು.

3) ಗಣಕಯಂತ್ರವನ್ನು ವೈದ್ಯಕೀಯ ತುರ್ತುಚಿಕಿತ್ಸಾ ವಿಭಾಗದಲ್ಲಿ ರೋಗಿಯ ಲಕ್ಷಣಗಳನ್ನು ತಿಳಿಯಲು ಬಳಸುವರು. ವ್ಯಕ್ತಿಯ ದೇಹದ ರಚನೆ, ಅಂಗಗಳ ವೈಫಲ್ಯ, ದೇಹದೊಳಗಿನ ಗಂಭೀರ ತೊಂದರೆ, ಶಸ್ತ್ರಚಿಕಿತ್ಸೆ,ರೋಗ ಲಕ್ಷಣಗಳನ್ನು ಕಂಡುಹಿಡಿಯಲು ಗಣಕಯಂತ್ರವನ್ನು ಬಳಸುವರು.

4) ಇಂದಿನ ವಾಣಿಜ್ಯ ಉದ್ದಿಮೆ ಸಂಪೂರ್ಣವಾಗಿ ಗಣೀಕರಣವಾಗಿಬಿಟ್ಟಿದೆ. ಡಿಬೆಸ, ಟ್ಯಾಲಿ, ಸಿ,ಸಿ++ ಮುಂತಾದವುಗಳು ವಾಣಿಜ್ಯ ಉದ್ದಿಮೆಗೆ ಹೇಳಿ ಮಾಡಿಸಿದ ತಂತ್ರಾಂಶಗಳಾಗಿವೆ.ವಾಣಿಜ್ಯ ವ್ಯವಹಾರದ ಲೆಕ್ಕ ಪತ್ರಗಳನ್ನು ಸಂಗ್ರಹಿಸಿಡಲು, ಅವುಗಳ ಮುದ್ರಣ ಪಡೆಯಲು ಗಣಕಯಂತ್ರವನ್ನು ಅತೀ ಹೆಚ್ಚು ಬಳಸಲಾಗುತ್ತದೆ.

5) ದೊಡ್ಡ ದೊಡ್ಡ ವಾಣಿಜ್ಯ ಮಳಿಗೆಗಳಲ್ಲ ಹಾಗೂ ಹೋಟೆಲಗಳಲ್ಲಿ ದಿನನಿತ್ಯದ ವ್ಯವಹಾರಕ್ಕಾಗಿ ಬಿಲಗಳು ಹಾಗೂ ಲೆಡ್ಜರಗಳನ್ನು ತಯಾರಿಸಲು ಗಣಕಯಂತ್ರವನ್ನು ಬಳಸುವರು.

6) ಕೃಷಿ ಕ್ಷೇತ್ರಗಳಲ್ಲಿ ಹೈಬ್ರಿಡ ತಳಿಯ ಸಂಶೋಧನೆ ,ರಸಗೊಬ್ಬರ, ಕೀಟನಾಶಕ ಹಾಗೂ ಕೃಷಿಯ ಉಪಕರಣಗಳನ್ನು ತಯಾರಿಸುವಲ್ಲಿ ಮತ್ತು ಸಸ್ಯಗಳ ಕಸಿಶಾಸ್ತ್ರ ಸಂಶೋಧನೆಯಲ್ಲಿ ಗಣಕಯಂತ್ರವನ್ನು ಬಳಸುವರು.

7) ಪ್ರಯೋಗಾಲಯ ಹಾಗೂ ಸಂಶೋಧನಾಲಯಗಳಲ್ಲಿ ಪ್ರಯೋಗ ಕಾರ್ಯಗಳಲ್ಲಿ ಪರಿಣಾಮಗಳ ನಿರೀಕ್ಷಣೆ, ಸಂಗ್ರಹಣೆಗಾಗಿ ಗಣಕಯಂತ್ರವನ್ನು ಬಳಸುವರು.

8) ಕೃತಕ ಉಪಗ್ರಹಗಳ ನಿಯಂತ್ರಣ ಹಾಗೂ ಕೃತಕ ಉಪಗ್ರಹಗಳ ದೂರ ಸಂಪರ್ಕಕ್ಕಾಗಿ ಹಾಗೂ ಭೂಮಿ ಇತರ ಗ್ರಹ ಹಾಗೂ ಉಪಗ್ರಹಗಳ ಭೂಗೋಳಿಕ ಅಂಶಗಳನ್ನು ತಿಳಿಯಲು ಗಣಕಯಂತ್ರವನ್ನು ಬಳಸುವರು.

9) ಹವಾಮಾನದ ಅಧ್ಯಯನಕ್ಕಾಗಿ, ವೀಕ್ಷಣೆಗಾಗಿ ಹಾಗೂ ಮುನ್ಸೂಚನೆ ಮುಂತಾದ ಅಂಶಗಳಿಗಾಗಿ ಉಷ್ಣಾಂಶ, ಮಳೆ, ಬಿರುಗಾಳಿ ಮುಂತಾದವುಗಳ ಬಗ್ಗೆ ಸ್ಪಷ್ಟ ಕಲ್ಪನೆಯನ್ನು ಗಣಕಯಂತ್ರವು ನೀಡುವುದು.

10) ಇತ್ತೀಚಿನ ದಿನಗಳಲ್ಲಿ ಮಿಲಿಟರಿಯ ನೌಕಾನೆಲೆ, ವಾಯುನೆಲೆ ಹಾಗೂ ಭೂಪಡೆಯ ಕಾರ್ಯಾಚರಣೆಯ ಕೇಂದ್ರಗಳಲ್ಲಿ ಗಣಕಯಂತ್ರವನ್ನು ಬಳಸುತ್ತಿದ್ದಾರೆ.

11) ಮನರಂಜನಾ ಕ್ಷೇತ್ರದ ಅಂಗಗಳಾದ ಸಿನೆಮಾ, ದೂರದರ್ಶನದ ಕಾರ್ಯಕ್ರಮಗಳ ತಯಾರಿಕೆಯಲ್ಲಿ ಗಣಕಯಂತ್ರವನ್ನು ಬಳಸುವರು.

12) ಕಂಪ್ಯೂಟರ ಮೂಲಕ ಪಠ್ಯ ಹಾಗೂ ರೇಖಾಚಿತ್ರಗಳನ್ನೊಳಗೊಂಡ ದಾಖಲೆ ಪುಸ್ತಕಗಳನ್ನು ದರ್ಶಕದ ಮೂಲಕ ವರ್ಣರಂಜಿತವಾಗಿ ತಯಾರಿಸುವುದನ್ನು ಡೆಸ್ಕ ಟಾಪ ಪಬ್ಲಿಷಿಂಗ ಎಂದು ಕರೆಯುತ್ತಾರೆ. ಈ ರೀತಿಯಾಗಿ ನಾವು ಕಂಪ್ಯೂಟರನ್ನು ಡಿ.ಟಿ.ಪಿ ಕಾರ್ಯಗಳಲ್ಲಿಯೂ ಬಳಸಬಹುದು.

## ಅಂತರ್ಜಾಲ :-

ಅಂತರಜಾಲ ಅನೇಕ ಗಣಕಯಂತ್ರಗಳನ್ನು ಸಂಪರ್ಕದ ಮೂಲಕ ಸೇರಿಸುವ ಒಂದು ಮಹಾಜಾಲ. ಇದು ವಿಶ್ವಾದ್ಯಾಂತ ಇರುವ ವಿವಿಧ ಗಣಕಯಂತ್ರಗಳ ನಡುವೆ, ಎಲ್ಲೆಡೆ ಲಭ್ಯವಿರುವ ದೂರವಾಣಿ ಜಾಲದ ಸಹಾಯದಿಂದ ಸಂಪರ್ಕವನ್ನೊದಗಿಸುತ್ತದೆ. ಇದರ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಬೃಹತ ಸಂಗ್ರಹ ಸಾಮರ್ಥ್ಯದ ಗಣಕಯಂತ್ರದಿಂದ ಬೇಕಾದ ಮಾಹಿತಿಯನ್ನು ಎಲ್ಲಿಯೂ ಪಡೆಯಬಹುದು. ಇಂದು ಇಂಟರನೆಟನಲ್ಲಿ 60 ಸಾವಿರಕ್ಕೂ ಹೆಚ್ಚು ಗಣಕಯಂತ್ರ ಜಾಲಗಳಿವೆ.ದೂರದರ್ಶನ,ದೂರವಾಣಿ ಅಥವಾ ಅಂಚೆ ವ್ಯವಸ್ಥೆಯಂತೆ ಅಂತರಜಾಲ ಕೂಡ ಒಂದು ಸಂಪರ್ಕ ಮಾಧ್ಯಮ. ನಾವು ವಿಶ್ವದ ವಿವಿಧ ಸಂಗ್ರಹಾಲಯಗಳಿಂದ ನಮಗೆ ಬೇಕಾದ ಮಾಹಿತಿಯನ್ನು ಶೀಘ್ರವಾಗಿ ಪಡೆಯಬಹುದು. ಇಲ್ಲವೇ ಒದಗಿಸಬಹುದು. ಬಹು ಮಾಧ್ಯಮ ಪ್ರಯೋಜನವನ್ನು ಸಹ ಇದರಿಂದ ಪಡೆಯಬಹುದು.

### ಅಂತರಜಾಲದ ಅರ್ಥ ಮತ್ತು ವ್ಯಾಖ್ಯೆಗಳು:

ಒಂದು ಗಣಕಯಂತ್ರದಿಂದ ಇನ್ನೊಂದು ಗಣಕಯಂತ್ರಕ್ಕೆ ಮಾಹಿತಿ ವರ್ಗಾವಣೆಗೆ ಸಂಪರ್ಕ ಏರ್ಪಡಿಸಲು ದೂರವಾಣಿ ಜಾಲ, ಮಾಡೆಮ್ ವಿದ್ಯುನ್ಮಾನ ಘಟಕ, ಡಿಶ್ ಆಂಟೇನಾ, ಕೃತಕ ಉಪಗ್ರಹ, ಇತ್ಯಾದಿಗಳನ್ನು ಬಳಸಿಕೊಳ್ಳಲಾಗುವುದು.

1) "ಎರಡು ಬೇರೆ ಬೇರೆ ಸ್ಥಳಗಳಲ್ಲಿರುವ ಗಣಕಯಂತ್ರಗಳನ್ನು ಮಾಹಿತಿ ವರ್ಗಾವಣೆಗಾಗಿ, ಅವೆರಡರ ನಡುವೆ ಸಂಪರ್ಕ ಏರ್ಪಡಿಸುವುದು ಅಂತರಜಾಲ .
2) ಅಂತರ ಜಾಲದಿಂದ ಪ್ರಪಂಚವು ಅತಿ ಹತ್ತಿರವಾಗುತ್ತಿದೆ. ಪ್ರಪಂಚವೇ ಮಾಹಿತಿ ಜಾಲದ ಬಲೆಯಲ್ಲಿದೆ.

**ಇಂಟರನೆಟನೊಂದಿಗೆ ಸಂಪರ್ಕ ಸಾಧಿಸುವುದು:**

ಒಂದು ಕಂಪ್ಯೂಟರನ್ನು ಇಂಟರನೆಟನೊಂದಿಗೆ ಸಂಪರ್ಕಿಸಲು, ಮತ್ತೊಂದು ಇಂಟರನೆಟ ಸೇವೆಗಳನ್ನು ಒದಗಿಸುವ ಕಂಪ್ಯೂಟರಿನ ಅವಶ್ಯಕತೆಯಿದೆ.

ಇಂಟರನೆಟ ಸಂಪರ್ಕಿಸಲು ಇವುಗಳ ಅವಶ್ಯಕತೆ ಇದೆ :-

1) ಕಂಪ್ಯೂಟರ್
2) ಬ್ರೌಸರ್
3) ಇಂಟರನೆಟ್ ಸಂಪರ್ಕ
4) ಇಂಟರನೆಟ್ ಸರ್ವೀಸ್ ಪ್ರೊವೈಡರ್

**ಇಂಟರನೆಟ್ ಸಂಪರ್ಕದ ವಿಧಗಳು:**

ಇಂಟರನೆಟ್ ಸಂಪರ್ಕಕ್ಕೆ ಮೂರು ವಿವಿಧ ವಿಧಾನಗಳಿವೆ. ಅವುಗಳು-

1) ಸಮರ್ಪಿತ ಇಂಟರನೆಟ್ ಸಂಪರ್ಕ
2) ಡಯಲ್ ಅಪ್ ಇಂಟರನೆಟ್ ಸಂಪರ್ಕ
3) ಬ್ರಾಡ್ ಬ್ಯಾಂಡ್ ಇಂಟರನೆಟ್ ಸಂಪರ್ಕ

**ಅಂತರಜಾಲದ ಅನುಕೂಲತೆಗಳು:**

ಅಂತರಜಾಲ ಎಂಬುದು ಮಾಹಿತಿಯ ಒಂದು ಬೃಹತ ಸಾಗರ. ಅದು ವಿಷಯಗಳ ಬಗ್ಗೆ ಮಾಹಿತಿಯನ್ನು ಕೊಡುತ್ತದೆ. ಹಾಗೂ ಏಕಕಾಲದಲ್ಲಿ ವಿಶ್ವದ ಯಾವುದೇ ಮೂಲೆಯಲ್ಲಿರುವವರೂ ಇದನ್ನು ಸಂಪರ್ಕಿಸಬೇಕಾದರೆ, ಕೇವಲ ಒಂದು ಕಂಪ್ಯೂಟರ್, ಒಂದು ಮೋಡೆಮ್ ಮತ್ತು ಟೆಲಿಫೋನ್ ಸಂಪರ್ಕವಿದ್ದರೆ ಸಾಕು. ಟೆಲಿಫೋನ್ ಲೈನಿನ ಮೂಲಕ ಇಂಟರನೆಟ್ ಸರ್ವೀಸ್ ಪ್ರೊವೈಡರ್‌ನೊಂದಿಗೆ ಸಂಪರ್ಕ ಸಾಧಿಸಬಹುದು. ಇಂಟರನೆಟನೊಂದಿಗೆ ಸಂಪರ್ಕ ಸಾಧಿಸುವ ಸೇವೆಯನ್ನು ಒದಗಿಸುವ ಸಂಸ್ಥೆಗಳಿಗೆ ಇಂಟರನೆಟನೊಂದಿಗೆ ಸಂಪರ್ಕ ಸಾಧನಗಳೆನ್ನುತ್ತಾರೆ. ಏಕಕಾಲದಲ್ಲಿ ಇಂಟರನೆಟ್ ಎಂದರೆ :

1) ನೆಟವರ್ಕ ಸಂಪರ್ಕಜಾಲದಂತೆ-ಇಂಟರನೆಟ್.

ಉದ್ಯಮಗಳು, ಅದರ ಕಾರ್ಯಲಯ ಹಾಗೂ ಉದ್ಯೋಗಿಗಳನ್ನು ಇಂಟರನೆಟ್ ಮೂಲಕ ಜೋಡಿಸಿ ಖಾಸಗಿ ಜಾಲವೆಂಬಂತೆ ಬಳಸುತ್ತಾರೆ. ಆ ರೀತಿಯ ಸಂಪರ್ಕಜಾಲವನ್ನು ಅಧಿಕೃತ ಮಾಹಿತಿಗಳನ್ನು ವರ್ಗಾಯಿಸಿ ಸಭೆ ಮತ್ತು ಸಮ್ಮೆಳನಗಳನ್ನು ಆಯೋಜಿಸಲು ಬಳಸಬಹುದು.

2) ಇಂಟರನೆಟ್ ಮಾಧ್ಯಮವಾಗಿ.

ಇಂಟರನೆಟನ್ನು ಉತ್ಪಾದಕರು, ವ್ಯಾಪಾರಿಗಳು ಉತ್ತಮ ಸಂಪರ್ಕ ಸಾಧನವಾಗಿ ಬಳಸಬಹುದು. ಉದಾಹರಣೆಗೆ, ಇಂಟರನೆಟನ್ನು ಬಳಸಿ ಒಂದು ಸಂಸ್ಥೆ ತನ್ನ ಉತ್ಪಾದನೆಗಳ ಬಿಡುಗಡೆಯನ್ನು ಜಾಹೀರಾತಿನ ಮೂಲಕ ಇಡೀ ವಿಶ್ವಕ್ಕೆ ತಿಳಿಸಬಹುದು.

3) ಇಂಟರನೆಟ ಮಾರುಕಟ್ಟೆಯಾಗಿ.

ನಿಮ್ಮ ವ್ಯಾಪಾರ ಮತ್ತು ಹಣಕಾಸು ವ್ಯವಹಾರಗಳನ್ನು, ಪೂರೈಕೆದಾರರೊಂದಿಗೆ, ಬಳಕೆದಾರರೊಂದಿಗೆ ಅಥವಾ ಹಣಕಾಸು ಸಂಸ್ಥೆಗಳೊಂದಿಗೆ, ಆನಲೈನಿನಲ್ಲಿ ಸಂಪರ್ಕಿಸಲು ಇಂಟರನೆಟ ಅನ್ನು ಬಳಸಿಕೊಳ್ಳಬಹುದು.

4) ಇಂಟರನೆಟ ವ್ಯಾವಹಾರಿಕ ವೇದಿಕೆಯಂತೆ.

ಇಂಟರನೆಟ ಎಂಬುದು ಒಂದು ವಿಶಾಲವಾದ ಮಾರುಕಟ್ಟೆ, ಸಾವಿರಾರು ಸಂಸ್ಥೆಗಳು ತಮ್ಮ ಉತ್ಪಾದನೆಗಳ ಬಗ್ಗೆ ಜಾಹೀರಾತಿನ ಮೂಲಕ ಇಂಟರನೆಟನಲ್ಲಿ ಪ್ರಚಾರ ಮಾಡುತ್ತವೆ. ಅವು ಇಂಟರನೆಟನ ಮೂಲಕ ನಿಮಗೆ ಬೇಕಾದ ವಸ್ತುಗಳನ್ನು ಆದೇಶ ನೀಡಿ ಪಡೆಯಬಹುದು.ಇದನ್ನು ಆನಲೈನ ಷಾಪಿಂಗ ಅಥವಾ ಇ-ಷಾಪಿಂಗ ಎಂದು ಕರೆಯಬಹುದು.

**ಅಂತರಜಾಲದ ಪ್ರಯೋಜನಗಳು:**

1) ಪ್ರಪಂಚದ ಒಂದು ಸ್ಥಳದಿಂದ ಇನ್ನೊಂದು ಸ್ಥಳದಲ್ಲಿರುವ ಜನರಿಗೆ ಮಾಹಿತಿಯನ್ನು ಹಂಚಿಕೊಳ್ಳಲು ಅಂತರಜಾಲ ಸಹಾಯಕ.
2) ಇದು ಅತ್ಯಂತ ವೇಗದ ಸಂಪರ್ಕ ಸಾಧನ.
3) ಗಣಕಯಂತ್ರದ ಮೂಲಕ ವ್ಯಾಪಾರ ನಡೆಸಲು ಇದು ಸಹಾಯಕ.
4) ಅಂತರಜಾಲವು ಜನರಿಗೆ ಶಿಕ್ಷಣ ಒದಗಿಸುತ್ತದೆ.
5) ಇದೊಂದು ಅಗಾಧ ಮಾಹಿತಿಗಳನ್ನೊಳಗೊಂಡ ಸಂಪರ್ಕ ಜಾಲ
6) ಪ್ರಪಂಚದಲ್ಲಿ ನಡೆಯುವ ಘಟನೆಗಳನ್ನು ಕ್ಷಣದಲ್ಲಿ ತಿಳಿಯಬಹುದು.
7) ವಿಡಿಯೋ ಸಂದರ್ಶನಕ್ಕಾಗಿ ಬಳಸಬಹುದು.
8) ಈ ವಾಣಿಜ್ಯಕ್ಕಾಗಿ ಅಂತರಜಾಲವನ್ನು ಬಳಸಬಹುದು.
9) ವಿದ್ಯುನ್ಮಾನ ಅಂಚೆಯನ್ನು ಕಳುಹಿಸಲು ಅಂತರಜಾಲವನ್ನು ಬಳಸುತ್ತೇವೆ.
10) ದತ್ತ ಸಂಗ್ರಹಣೆ ಕಾರ್ಯಗಳಲ್ಲಿ ಅಂತರಜಾಲವನ್ನು ಉಪಯೋಗಿಸುತ್ತೇವೆ.
11) ಸಂಶೋಧನೆ ಮಾಡುವಲ್ಲಿ ಕೂಡಾ ಅಂತರಜಾಲವನ್ನು ಬಳಸುತ್ತೇವೆ.
12) ವಧು-ವರ ಅನ್ವೇಷಣೆಯಂತಹ ಕೆಲಸಗಳಲ್ಲಿಯೂ ಇಂದು ನಾವು ಅಂತರಜಾಲವನ್ನು ಬಳಸಬಹುದು.

Cultivation, it is not possible to bring them back to agriculture. Thus, the land loss for agriculture will be permanent and great. In this context, the agricultural crisis would be also a permanent crisis and trap At the macro level, the decline in agricultural production would necessitate increase in import of food grains. The dependence on food

imports would drain the foreign exchange and India thereafter will become a net importer of grains, capital, technology and money.

Measures to Improve Productivity:

The following measures to increase the productivity of Indian agriculture:

1. The farmers should be provided with a stable price for their agricultural products at a remunerative level.

2. There should be an expansion of adequate marketing facilities to sell the agricultural product.

3. The land tenure system should be changed in favour of the cultivator.

4. There should be a provision of cheap credit on reasonable terms especially to small farmers for better techniques of production.

5. The modern inputs like fertilisers. Pesticides and improved seeds should be made available to the farmers at reasonable prices.

6. There should be provisions of education, research and extension of agro-economic services to spread the knowledge of improved methods of farming.

7. The State should make provision for the development of resources which are not possible in the part of individual farmers e.g. large scale irrigation, land reclamation or resettlement projects.

8. There should be an extension of land used and intensification and utilisation of land already in use through improved and scientific implements.

**Conclusion:**

Agriculture in India is undergoing a structural change leading to a crisis situation. The rate of growth of agricultural output is gradually declining in the recent years. The relative contribution of agriculture to the GDP has been declining over time steadily. The

performance of agriculture by crop categories also clearly indicates the slowing down process of agriculture in India. It is argued that the root cause of the crisis was that agriculture is no more a profitable economic activity when compared to other enterprises. It means that the income derived from these activities is not sufficient enough to meet the expenditure of the cultivators. And therefore, unless agriculture is made a profitable enterprise, the present crisis cannot be solved. The related factors responsible for the crisis include: dependence on rainfall and climate, liberal import of agricultural products, reduction in agricultural subsidies, lack of easy credit to agriculture and dependence on money lenders, decline in government investment in the agricultural sector and conversion of agricultural land for alternative uses .it revealed that the agricultural crisis would be affecting a majority of the people in India and the economy as a whole in the long run. And therefore, it can be argued that the crisis in agriculture is a crisis of the country as a whole. the only remedy to the crisis is to do all that is possible to make agriculture a profitable enterprise and attract the farmers to continue the crop production activities. As an effort towards this direction, the government should augment its investment and expenditure in the farm sector. Investment in agriculture and its allied sectors, including irrigation, transport, communication, rural market, rural infrastructure and farm research, should be drastically increased, and the government should aim at integrated development of the rural areas. Implementation of National Rural Employment Guarantee Scheme can also become a means of revival of the rural economy.

**References:**


1. Albert Christopher Dhas, *Agricultural Crisis in India: The Root Cause and Consequences* ,MPRA Paper No. 18930, posted 1. December 2009 07:07 UTC
2. A.N. Agraval, *Indian Economy Problems of Development and Planning,* New age International p pvt.ltd.
3. Pratiyogita Darpan *Indian Economy*(2012-2013).
4. V Mallika, *Agrarian Crisis in India: It's Impact on Production and Export*,indiastat.com july-august,2012(socio -economic voices)

5. Venkatesh Athreya, The Current Agrarian Crisis in India: An Overview (Sundarayya.org)
6. www.shareyouressays.com
7. www.preservearticles.com

**ISSN 2454-7255** **Original Article** **VOL 5|ISSUE 2|Mar-2015**

Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org

# ಶರಣಬಸವೇಶ್ವರ ಮಹಾಪೀಠಕ್ಕೆ ದರ್ಶನಗೈದ ರಾಜಕೀಯ ಮುತ್ಸದ್ದಿ ವೀರಶೈವ ನಾಯಕರು

Prof. N.S Hugar
Asst Professor, Godutai Womens Degree for Arts & Commerce College
Kalaburagi

ಮಹಾದಾಸೋಹಿ ಶರಣಬಸವೇಶ್ವರ ಪೀಠಕ್ಕೆ ಕಿತ್ತೂರು ಅರಸ ಮಲ್ಲ ಸರ್ಜ, ರಾಣಿ ಚೆನ್ನಮ್ಮ, ಕೆಳದಿ ರಾಣಿಯರು ದರ್ಶನಗೈದು ಅವರ ಮಾರ್ಗದರ್ಶನದಂತೆ ಆಡಳಿತ ನಡೆಸಿಕೊಂಡು ಹೋದರೆನ್ನುವುದಕ್ಕೆ ಇತಿಹಾಸಗಳು ಸಾಕ್ಷಿಯಾಗಿವೆ. ಅಂದಿನಿಂದ ಇಂದಿನವರೆಗೂ ಆ ಪರಂಪರೆ ನಡೆದುಕೊಂಡು ಬರುತ್ತಿದೆ.ಮಾಹಾದಾಸೋಹಿ ಶರಣಬಸವರ ಕಾಲದಿಂದಲೂ ಮಾಹಾದಾಸೋಹ ಪೀಠದ ದರ್ಶನ ಬಯಸಿ ಹಲವಾರು ಧಾರ್ಮಿಕ ಮಹಾಪುರುಷರು ಬಂದುದುಂಟು ಶರಣಬಸವರ ಮಹಾದಾಸೋಹ ಪಿಠಾಧಿಪತಿಗಳ ದರ್ಶನ ಸಂಭಾಷಣೆಯಿಂದ ಸಂತಸಗೊಂಡುದುಂಟು ಉದ್ಧಾರವಾದದ್ದುಂಟು.

ದೇಶದ ನಾಡಿನ ಹಲವಾರು ಧರ್ಮಕ್ಷೇತ್ರಗಳ ಹಾದಿಗೆಳೆಲ್ಲವೂ ಒಂದಲ್ಲ ಒಂದು ಸಂಧರ್ಭದಲ್ಲಿ ಮಹಾದಾಸೋಹ ಪೀಠದ ದರ್ಶನಕ್ಕೆಂದು ಕಲಬುರಗಿಗೆ ಬಂದು ಕೂಡಿರಬಹುದಾಗಿದೆ.ಪೂಜ್ಯ ದೊಡ್ಡಪ್ಪ ಅಪ್ಪ ಅವರ ಕಾಲದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ 1927 ಫೆಬ್ರವರಿ 22 ರಂದು ರಾಷ್ಟ್ರಪಿತ ಗಾಂಧಿಜಿಯವರು ಪಿಠದ ದರ್ಶನಗೈದು ಪೂಜ್ಯ ದೊಡ್ಡಪ್ಪ ಅಪ್ಪಾ ಅವರ ದರ್ಶನಾಶಿರ್ವಾದ ಪಡೆದು ಶರಣಬಸವಶ್ವೆರ ದೇವಸ್ಥಾನದ ಆವರಣದಲ್ಲಿಯೆ ಸಾರ್ವಜನಿಕರನ್ನುದ್ದೇಶಿಸಿ ಸ್ವಾತಂತ್ರ್ಯಕ್ಕಾಗಿ ಕರೆ ಕೊಟ್ಟದ್ದನ್ನು ನಾವು ಇತಿಹಾಸದಿಂದ ತಿಳಿದುಕೊಂಡಿದ್ದೆವೆ.

ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಕಾಲದಲ್ಲಿ ಧಾರ್ಮಿಕ ಮಹಾಪುರಷರಲ್ಲದೆ. ಅನೇಕ ರಾಜಕೀಯ ಮುತ್ಸದ್ದಿ ನಾಯಕರು ಮಹಾದಾಸೋಹ ಪೀಠಕ್ಕೆ ಬರುವುದು ಹೆಚ್ಚಾಯಿತು.ಈಗ ಮಹಾದಾಸೋಹ ಪೀಠದಲ್ಲಿ ಎರಡು ಮಾರ್ಗಗಳಿಂದ ನಿಜವಾದ ಧಾರ್ಮಿಕ ಸ್ವರೂಪವು ತಿಳಿಕೆಗೆ. ಬರುತ್ತದೆ ಒಂದು ಮಹಾದಾಸೋಹ ಪೀಠದಲ್ಲಿ ನಿರ್ಮಿಸಲಾಗಿರುವ ಧಾರ್ಮಿಕ ಅಧ್ಯಾತ್ಮಿಕ ವಾತಾವರಣ, ಇನ್ನೊಂದು ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರೊಂದಿಗೆ ಕೈಗೊಳ್ಳಬಹುದಾದ ಸಂಭಾಷಣೆ–ಸಂವಾಹ ಕ್ರಿಯೆ ––––

ಪೂಜ್ಯ ಡಾ. ಅಪ್ಪಾಜಿಯವರು ಯಾವುದೆ ಧರ್ಮವಿರಲಿ ಅದು ಶ್ರೇಷ್ಠವಾಗುವುದು ಸೇವಾದಾಸೋಹದಿಂದ" ಎಂದು ಹೇಳುತ್ತಾರೆ. ಅವರ ದೃಷ್ಠಿಯಲ್ಲಿ "ಸರ್ವಧರ್ಮಗಳ ಮರ್ಮವು ದಾಸೋಹವೆ" ಆಗಿದೆ.ವೇದಶಾಸ್ತ್ರ ಆಗಮ ಪುರಾಣಗಳ ಮರ್ಮವನರಿತ ಫಲ ದಾಸೋಹವಯ್ಯ ಝಿನ–ಬುದ್ಧ ಶಿಖ್ಖ–ನಿರಂಕಾರಿ ಧರ್ಮಗಳ ಮರ್ಮವನರಿತ ಫಲ ದಾಸೋಹವಯ್ಯ, ಕ್ರೈಸ್ತ–ಇಸ್ಲಾಂ ಪಾರಸಿ ಧರ್ಮಗಳ ಮರ್ಮವನರಿದ ಫಲ ದಾಸೋಹವಯ್ಯ ಪುರಾತನರು ಬಸವಾದಿ ಪ್ರಮಥರು ಶರಣಬಸವನ ಪರಂಪರೆಯವರು ವಚನವನೋದಿ ಪ್ರಸಂಗಾನುಭವದಲ್ಲಿದ್ದು ಅರಿದ ಫಲ ದಾಸೋಹವಯ್ಯ. ಈ ಕಾರಣದಿಂದಲೇ ಪ್ರಾಂಜಲ ಮನದ ಧಾರ್ಮಿಕ ಅಧ್ಯಾತ್ಮಿಕ ರಾಜಕೀಯ ದಾರ್ಶನಿರಿಗೆಲ್ಲ ಮಹಾ ದಾಸೋಹ ಪೀಠವು ದರ್ಶನಿಯವಾದ ಪವಿತ್ರ ಸ್ಥಳವಾಗಿದೆ.ಶರಣಬಸವೇಶ್ವರ ಮಹಾದಾಸೋಹ ಪೀಠಕ್ಕೆ ಸಮಾಜದ ಎಲ್ಲ ವರ್ಗದ ಗಣ್ಯಮಾನ್ಯರು ಭೇಟಿ ನೀಡಿದ್ದಾರೆ. ದರ್ಶನಾಶಿರ್ವಾದ ಪಡೆದುಕೊಂಡಿದ್ದಾರೆ. ಅಂಥವರಲ್ಲಿ ಸ್ವಾತಂತ್ರ್ಯ

ಸೇನಾನಿಗಳು, ರಾಷ್ಟ್ರ ಭಕ್ತರು, ಸಮಾಜ ಸೇವಕರು, ನ್ಯಾಯಮೂರ್ತಿಗಳು ಶ್ರೇಷ್ಠ ಉದ್ಯಮಿಗಳು, ರಾಜಕೀಯ ಮತ್ಸದ್ಧಿ ನಾಯಕರು ಹೀಗೆ ಹಲವಾರು ವರ್ಗದ ಸಾಧಕರನ್ನು ಹೆಸರಿಸುತ್ತಾ ಹೇಳಬಹುದಾಗಿದೆ. ಅಂಥವರಲ್ಲಿ ಗಣ್ಯರು.

1. ಸಿದ್ದವನಹಳ್ಳಿ ನಿಜಲಿಂಗಪ್ಪ ನವರು
2. ಚಂದ್ರಶೇಖ ಪಾಟೀಲ ಮಹಾಗಾಂವ
3. ಬಸಪ್ಪ ದಾನಪ್ಪ ಜತ್ತಿಯವರು
4. ವೀರೇಂದ್ರ ಪಾಟೀಲ
5. ಶಿವರಾಜ ವೀರಭದ್ರಪ್ಪಾ ಪಾಟೀಲ
6. ಎಸ್ ಮಲ್ಲಿಕಾರ್ಜುನಯ್ಯ
7. ಜಯದೇವಪ್ಪಾ ಹಾಲಪ್ಪ ಪಾಟೀಲ
8. ಭೂಕನಕೆರೆ ಸಿದ್ದಲಿಂಗಪ್ಪಾ ಯಡಿಯೂರಪ್ಪಾ
9. ಮಹಾದೇವಪ್ಪಾ ರಾಂಪೂರೆ
10. ಶರಣಗೌಡ ಇನಾಮದಾರ
11. ವಿಶ್ವನಾಥ ರೆಡ್ಡಿ ಮುದ್ನಾಳ
12. ಬಾಪೂಗೌಡ ದರ್ಶನಾಪೂರ
13. ಸೋಮರಾಯಪ್ಪ ಬೊಮ್ಮಾಯಿ
14. ಧರ್ಮರಾವ ಅಫಜಲಪೂರ
15. ಭೀಮಣ್ಣ ಖಂಡರೆ
16. ಬಸವರಾಜ ಪಾಟೀಲ ಸೇಡಂ
17. ಗುರುಪಾದಪ್ಪ ನಾಗಮಾರಪಳ್ಳಿ
18. ಚೌಡಪ್ಪಗೌಡ
19. ಎಮ್.ವಾಯ್ ಪಾಟೀಲ
20. ಬಸವರಾಜ ಪಾಟೀಲ ಅಟ್ಟೂರ
21. ಬಸವರಾಜ ಪಾಟೀಲ ಹುಮನಾಬಾದ
22. ಜಗದೀಶ ಶೆಟ್ಟರ
23. ವೀರಪ್ಪಾ ಮೋಯಿಲಿ
24. ಚಂದ್ರಶೇಖರ ಪಾಟೀಲ ಮದನಾ
25. ಶಿವಶಂಕರಪ್ಪಾ ಪಾಟೀಲ ಶಿರವಾಳ
26. ಅಮರೇಗೌಡ ಬೈಯ್ಯಾಪೂರ
27 ಎ. ವಿ. ಪಾಟೀಲ ಆಳಂದ
28. ಡಾ. ಮಲಕರೆಡ್ಡಿ
29. ಶ್ರೀಮತಿ ಲೀಲಾದೇವಿ ಆರ್ ಪ್ರಸಾದ
30. ಚೆನ್ನಾರೆಡ್ಡಿ ತುನ್ನೂರ
31. ಶ್ರೀಮತಿ ರಾಣಿ ಸತೀಷ
32. ಶ್ರೀಮತಿ ಬಸವರಾಜೇಶ್ವರಿ
33. ವಿಮಲಾಗೌಡ
34. ಡಾ. ವಿಶ್ವನಾಥ ರೆಡ್ಡಿ
35. ಎಮ್. ವಿ. ರಾಜಶೇಖರನ್
36. ರಾಜಶೇಖರ ಮೂರ್ತಿ
37. ಬಸವರಾಜ ಬೊಮ್ಮಾಯಿ
38. ವೈಜನಾಥ ಪಾಟೀಲ
39. ಅಣ್ಣಾರಾವ ಪಾಟೀಲ ಕೋರಳ್ಳಿ
40. ಶರಣಬಸಪ್ಪಾ ಪಾಟೀಲ ದರ್ಶನಾಪೂರ
41. ಶರಣಬಸಪ್ಪಾ ಪಾಟೀಲ ದಂಗಾಪೂರ
42. ಚಂದ್ರಶೇಖರ ಪಾಟೀಲ ರೇವೂರ
43. ಶರಣಪ್ರಕಾಶ ಪಾಟೀಲ
44. ಬಿ.ಆರ್. ಪಾಟೀಲ
45. ಪ್ರಕಾಶ ಖಂಡ್ರೆ
46. ಈಶ್ವರ ಖಂಡ್ರೆ
47. ಗುರುಗೌಡ ಪಾಟೀಲ ಶಿರವಾಳ
48. ರಾಜಶೇಖರ ಪಾಟೀಲ ಹುಮನಾಬಾದ

49. ಅಲ್ಲಮ ಪ್ರಭು ಪಾಟೀಲ

50. ದೊಡ್ಡಪ್ಪಗೌಡ ಪಾಟೀಲ

51. ದತ್ತಾತ್ರೇಯ ಪಾಟೀಲ ರೇವೂರ

52. ಶಶೀಲ. ಗಂಗಾಧರ ನಮೋಶಿ

53. ಬಿ.ಜಿ. ಪಾಟೀಲ

"ವ್ಯಕ್ತಿ ಚಿಹ್ನೆ ಉಳಿಯುವುದು ಅಳಿಯುವುದು ಅವನ ಚರಿತ್ರೆಯಿಂದ ಆ ಚರಿತ್ರೆ ನಮ್ಮ ನಮ್ಮ ಸ್ಮರಣೆಗಳನ್ನು ಚೇತನಗೋಳಿಸಿ ನಮ್ಮ ಬದುಕಿನ ಮೂಲಕ ಜೀವಂತವಾಗಿ ಉಳಿದರೆ, ಬೆಳೆದರೆ ಮುಂದೆ ಸಾಗಿದರೆ ಅದೆ ಪುನರಜನ್ಮ"

## ಸಿದ್ದವನಹಳ್ಳಿ ನಿಜಲಿಂಗಪ್ಪಾ

ಇವರು 10 ಡಿಸೆಂಬರ್ 1902 ರಲ್ಲಿ ಒಂದು ಲಿಂಗಾಯತ ಮಧ್ಯಮ ವರ್ಗದ ಕುಟುಂಬದಲ್ಲಿ ಅಂದಿನ (ಚಟಾಲ್‌ದುರ್ಗ) ಇಂದಿನ ಚಿತ್ರದುರ್ಗ ಜಿಲ್ಲೆಯ ಸಿದ್ದವನ ಹಳ್ಳಿ ಎಂಬ ಗ್ರಾಮದಲ್ಲಿ ಜನಿಸಿದರು. ಇವರು ಚಿಕ್ಕವರಿದ್ದಾಗಲೇ ಇವರ ತಂದೆ ತೀರಿಹೊಗುತ್ತಾರೆ.ತಂದೆ ಅಡಿವೆಪ್ಪಾ ತಾಯಿ. ನೀಲಮ್ಮ ಇವರ ಚಿಕ್ಕಮ್ಮ ಸಾವಕ್ಕ ಮತ್ತು ಅವರ ಪತಿ, ಸಿದ್ದವನಹಳ್ಳಿ ರುದ್ರಪ್ಪಾ ನಿಜಲಿಂಗಪ್ಪಾನನ್ನು ಶಾಲಾಭ್ಯಾಸಕ್ಕೆ ದಾವಣಗೆರೆಗೆ ಕರೆದೊಯ್ದರು. ಆ ಕಾರಣಕ್ಕೆ ಸಿದ್ದವನಹಳ್ಳಿ ನಿಜಲಿಂಗಪ್ಪ ಎಂದು ಹೆಸರು ಬಂದುದು.

ಕ್ಲಾಸಿನಲ್ಲಿ ಎಲ್ಲರಿಗಿಂತ ಜಾಣ ವಿಧ್ಯಾರ್ಥಿಯಾಗಿದ್ದ ನಿಜಲಿಂಗಪ್ಪ ಇಂಗ್ಲೀಷ ಕಲಿಯಲಾರಂಭಿಸಿದ ದಾವಣಗೆರೆಯಲ್ಲಿ ಒಂದು ಹೈಸ್ಕೂಲಿನಲ್ಲಿ ಪ್ರವೇಶ ಪಡೆದು ಎಲ್ಲ ಆಟ ಪಾಠ ಚಟುವಟಿಕೆಗಳ'ಲ್ಲಿ ಮುಂದಾಳಾಗಿರುತ್ತಿದ್ದ ಅವರ ಓದು ವ್ಯಾಪಕವಾಗಿತ್ತು. ಅವರು ಅನಿಬೆಸೆಂಟ್ ಸಂಪಾದಿಸುತ್ತಿದ್ದ ನ್ಯೂ ಇಂಡಿಯಾ ಪತ್ರಿಕೆಯನ್ನು ಮತ್ತು ಗಾಂಧೀಜಿ ಭಾಷಣಗಳನ್ನು ನಿಯಮಿತವಾಗಿ ಓದುತ್ತಿದ್ದರು.

ಓದಿನಲ್ಲಿ ಮುಂದಿದ್ದ ನಿಜಲಿಂಗಪ್ಪನವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರವೇಶ ಪಡೆದ ನಂತರ ಬೆಂಗಳೂರಿನ ರಾವಬಹಾದ್ದೂರ ಧರ್ಮ ಪ್ರವರ್ತ ಗುಬ್ಬ ತೋಟದಪ್ಪ ಛತ್ರದಲ್ಲಿದ್ದುಕೊಂಡು 1924 ರಲ್ಲಿ ಪದವಿಧರರಾದರು. ಇಂದಿಗೂ ಈ ಛತ್ರ ಹಾಗು ಸರ್ಪಭೂಷಣ ಶಿವಯೋಗಿ ಮಠಗಳು ಅನೇಕ ಬಡ ವಿಧ್ಯಾರ್ಥಿಗಳ ಬಾಳಿಗೆ ಬೆಳಕನ್ನು ನೀಡುವ ಆಶ್ರಯ ತಾಣವಾಗಿದೆ.

ನಂತರ ನಿಜಲಿಂಗಪ್ಪನವರು ಪುನಾದ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದು ನಂತರ ವಕೀಲಿ ವೃತ್ತಿಯನ್ನು ಆರಂಭಿಸುತ್ತಾರೆ. ಆ ಸಂಧಭದಲ್ಲಿ ದೇಶಾದ್ಯಂತ ಗಾಂಧಿಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಆಂದೋಲನ ಪ್ರಭಾವಕ್ಕೊಳಗಾಗಿ 1939 ತಿರುವನೂರಲ್ಲಿ ಸೇಂದಿಮರಗಳನ್ನು ಕಡಿಯುವ ಸತ್ಯಾಗ್ರಹದಲ್ಲಿ 25 ಸಾವಿರ ಜನರನ್ನು ಸೇರಿಸಿ ಕಾನೂನು ಭಂಗ ಮಾಡಿದುದಕ್ಕೆ ಇವರನ್ನು ಭಂಧಿಸಿ ಜೈಲಿಗೆ ಕಳಿಸಲಾಗುತ್ತದೆ. ಆವಾಗ ಅವರ ಪತ್ನಿ ನಿಜಲಿಂಗಪ್ಪನವರನ್ನು ಕುರಿತು–"ನೀವು ಗಾಂಧಿ ಪರೀಕ್ಷೆಗೆ ಕುಳಿತ್ತಿದ್ದಿರಿ, ಪಾಸಾಗಲೇ ಬೇಕು". ಎಂದು ಹೇಳುತ್ತಾರೆ. ಆಗಿನ ಬ್ರಿಟಿಷ್ ಸರಕಾರಕ್ಕೆ ಕ್ಷಮಾಪಣೆ ಕೇಳದೆ ಇದ್ದುದರಿಂದ ಇವರ ಕಾನೂನಿನ ಸನ್ನದನ್ನು ವಾಪಸಪಡೆದುಕೊಳ್ಳಲಾಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ಸಿನ ಸ್ವಯಂ ಸೇವಕರಾಗಿ ದುಡಿದು ನಂತರ ಕಾಂಗ್ರೇಸ್ ಪ್ರದೇಶದ ಸಮೀತಿ ಸದಸ್ಯರಾಗಿ ನಂತರ 1968ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ಸಿನ ಅಧ್ಯಕ್ಷರಾದರು.

ಅದಕ್ಕೂ ಮೊದಲು ಸಂವಿಧಾನ ಘಟನಾ ಸಮಿತಿಯ ಸದಸ್ಯರಾಗಿ, 1946ರಿಂದ 1950ರ ವರೆಗೆ ಸಂವಿಧಾನ ರಚನೆಯಾಗುವವರೆಗೆ ಕಾರ್ಯನಿರ್ವಹಿಸಿ ನಂತರ ಮೊದಲ ಲೋಕಸಭೆಯ ಸದಸ್ಯರಾಗಿ ಚಟಾಲದುರ್ಗ ಇಂದಿನ ಚಿತ್ರದುರ್ಗದಿಂದ ಆಯ್ಕೆಯಾದರು.

ಈ ರೀತಿಯಾಗಿ ಆರಂಭವಾದ ಅವರ ಸಾರ್ವಜನಿಕ ಸೇವೆ ಕರ್ನಾಟಕ ರಾಜ್ಯದ ಏಕೀಕರಣಕ್ಕೆ ಅವರು ಮಾಡಿದ ಸೇವೆ ಅವಿಸ್ಮರಣೀಯ ನಂತರ ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾಗಿ ಕಾರ್ನಾಟಕ ರಾಜ್ಯದ ಅಭಿವೃದ್ಧಿಗೆ ಭದ್ರ ಬುನಾದಿಯನ್ನು ಹಾಕಿದರು.

ಅವರನ್ನು ಕರ್ನಾಟಕದ ರೂವಾರಿ ಎಂದು ಕರೆಯುತ್ತಾರೆ ಕರ್ನಾಟಕದ ಕೃಷಿ, ನೀರಾವರಿ, ಔದ್ಯೋಗಿಕ ಮತ್ತು ಸಾರಿಗೆ, ಸಂಪರ್ಕ ಮುಂತಾದ ಅಭಿವೃದ್ಧಿಯೋಜನೆಗಳನ್ನು ರೂಪಿಸಿ. ಅವನ್ನು ಕಾರ್ಯಗ'ತಗೊಳಿಸುವಲ್ಲಿ ಪ್ರಾಮಾಣಿಕ ಪ್ರಯುತ್ನ ಮಾಡಿದರು. ಆದ್ದರಿಂದಲೆ, ಅವರನ್ನು ಕರ್ನಾಟಕದ ಅಭಿವೃದ್ಧಿಯ ಹರಿಕಾರಕಾರರು ಎಂದು ಕರೆಯಾಲಾಗುತ್ತದೆ.

ಪ್ರಮಾಣಿಕ ಮತ್ತು ಮೌಲ್ಯಾಧಾರಿತ ರಾಜಕಾರಣಕ್ಕೆ ನಿಜಲಿಂಗಪ್ಪ ನವರ ಕೊಡುಗೆ. ಅಮೂಲ್ಯವಾದದ್ದು ಎರಡು ಬಾರಿ ಕರ್ನಾಟಕದ ಮುಖ್ಯಮಂತಿಯಾದರೂ ಬೆಂಗಳೂರಿನಲ್ಲಿ ವಾಸಕ್ಕೆ ಒಂದು ಮನೆಯನ್ನೂ ಕೂಡ ಮಾಡಿಕೊಳ್ಳದ ಮುಖ್ಯಮುಂತ್ರಿ ಎಂದು ಕರೆಯುತ್ತಾರೆ.

ಸಿದ್ದವನಹಳ್ಳಿ ನಿಜಲಿಂಗಪ್ಪ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಮಹಾದಾಸೋಹಿ ಶರಣಬಸವರ ಸನ್ನಿಧಿಯ ದರ್ಶನಾಶಿರ್ವಾದಗೊಂಡು ಪೂಜ್ಯ ಡಾ. ಶರಣಬಸವಪ್ಪ ಅಪ್ಪಾ ಅವರನ್ನು ಭೇಟಿಯಾದರು.

ಪೂಜ್ಯ ಡಾ. ಅಪ್ಪಾಜಿಯವರು ನಿಜಲಿಂಗಪ್ಪನವರೊಂದಿಗೆ ಹಲವಾರು ಆಧ್ಯಾತ್ಮಕ & ರಾಜಕೀಯ ವಿಚಾಗಳನ್ನು ಕುರಿತು ಮಾತನಾಡಿದರು. ಶ್ರೀ ಎಸ್ ನಿಜಲಿಂಗಪ್ಪನವರು ವೀರಶೈವರು ಆತ್ಮಲಿಂಗ ಸಾಧನೆ ಮಾಡಿದರೆ ಸಾಕು, ಕಡ್ಡಾಯವಾಗಿ ಇಷ್ಟಲಿಂಗ ಧಾರಣೆ ಮಾಡಬೇಕಾದುದಿಲ್ಲ ಎಂದು ಮಾತನಾಡುತ್ತ ನುಡಿದರು.

ಆಗ ಪೂಜ್ಯ ಡಾ. ಅಪ್ಪ ಅವರು ಆತ್ಮಲಿಂಗ ಸಾಧನೆಗೆ ಈಷ್ಟಲಿಂಗವೂ ಮೂಲ ಆದುದರಿಂದ ಪ್ರತಿಯೊಬ್ಬ ವೀರಶೈವರನು ಲಿಂಗಧಾರಣೆ ಮಾಡಿಕೊಳ್ಳಲೇಬೇಕು. ವೀರಶೈವರನ್ನು 'ಲಿಂಗವಂತ' ಎಂದು ಕರೆದಿರುವುದು ಈ ಕಾರಣದಿಂದಲೇ ಎಂದು ವಿವರಿಸದಾಗ, ನಿಜಲಿಂಗಪ್ಪನವರು ಅಪ್ಪಾಜಿಯವರ ಮಾತುಗಳಿಗೆ ತಲೆ ಅಲ್ಲಾಡಿಸಿದರು.

ಎಸ್ ನಿಜಲಿಂಗಪ್ಪ ಕರ್ನಾಟಕ ಕಂಡ ಶ್ರೇಷ್ಠ ಮುಖ್ಯಮಂತ್ರಿ ಅವರು ಏನೆ ಮಾಡಿದರೂ ಪಾರದರ್ಶಕವಾಗಿತ್ತು ಅವರು ಭಾರತದ ಉದಾತ್ತ ಪುತ್ರರಲ್ಲೊಬ್ಬರು, ನಿಷ್ಠಾವಂತ ಗಾಂಧಿವಾದಿ ರಾಷ್ಟ್ರಭಕ್ತ ಉನ್ನತ ರಾಷ್ಟ್ರೀಯ ಮುತ್ಸದ್ದಿ.

ಅವರು ಬದುಕಿನ ಕೊನೆಯವರೆಗೂ ಜಾಗೃತ ಮನಸ್ಸನ್ನು ಹೊಂದಿದ್ದರು ಮೃತ್ಯುವನ್ನು ಜೈಲುವಾಸದಂತೆ ಸಮ ಮನಃ ಸ್ಥಿತಿಯಿಂದಲೆ ಎದುರಿಸಿದರು. 98ರ ವಯೋವೃದ್ಧರಾಗಿ ದಿನಾಂಕ 8.8.2000 ರಂದು ಇಹಲೋಕ ತ್ಯಜಿಸಿದರು.

## ಚಂದ್ರಶೇಖರ ಪಾಟೀಲ ಮಹಾಗಾಂವ

ಜನೆವರಿ 25 1918ರಂದು ಚಂದ್ರಶೇಖರ ಪಾಟೀಲರ ಜನನ ಅವರು ಹುಟ್ಟಿದ ತಾಣ ಮುಂದೊಂದು ದಿನ ಹೈದ್ರಾಬಾದ ಕರ್ನಾಟಕದ ಅಖಿಲ ಕರ್ನಾಟಕದ ಜನತೆಯ ಪ್ರೀತಿಯ ಮಡಿಲಾಗಬಹುದೆಂದು ಅಂದು ಯಾರೂ ಎಣಿಸಿರಲಿಲ್ಲ.

ಎಳೆಯ ಚಂದ್ರಶೇಖರರು ಓಡಿ ಆಡಿ ಬೆಳೆದು ದೊಡ್ಡವರಾಗಿ ಸಂಸ್ಕಾರಗೊಂಡು ಸ್ವಾತಂತ್ರ್ಯದ ಸಹೋದರತೆಯ ಭಾವನೆಗಳನ್ನು ಮೈಗೂಡಿಸಿಕೊಂಡು ಪರಿಸರವದು.

ಚಂದ್ರಶೇಖರ ಪಾಟೀಲರ ತಂದೆ ಸಂಗಶೆಟ್ಟಿ ತಾಯಿ ವೀರಮ್ಮನವರು ಮಗ ಚಂದ್ರಶೇಖರನನ್ನು 1925 ಆಗಷ್ಟ ತಿಂಗಳಲ್ಲಿ ಶಾಲೆಗೆ ಕಳುಹಿಸಿದರು ಇವರು ಬಾಲಕರಿದ್ದಾಗ ಗೆಳೆಯರ ಬಳಗ ಕಟ್ಟುವುದು ಶ್ರಾವಣದಲ್ಲಿ ಸೋದರಮಾವ ಶರಣಬಸವೇಶ್ವರ ಪುರಾಣ ಪ್ರವಚನ ನಡೆಸಿದರೆ ಆ ಕಥೆಗಳನ್ನು ಕೇಳುವ ಉತ್ಸಾಹಿಯಾಗಿದ್ದರು.

14ರ ಹರೆಯದಲ್ಲಿಯೇ ಚಂದ್ರಶೇಖರರು ತಂದೆಯ ಆದೇಶದಂತೆ ನೇಗಿಲಯೋಗಿಯಾದರು. ತನ್ನ ಸ್ನೇಹಿತರಿಗೆಲ್ಲ ಒಕ್ಕಲುತನದ ಮಹತ್ವವನ್ನು ಮನ ಮುಟ್ಟಿಸಿದರು. ಸಮಾಜ ಕಲ್ಯಾಣಕ್ಕೆ ಅವರ ಮನ ಮಿಡಿಯುತ್ತಿತ್ತು ಸಾಮಾಜಿಕ ಚಿಂತನೆಯ ಕಡೆಗೆ ಹೆಚ್ಚಿನ ಆಸಕ್ತಿ ಒಲವು ಹೊಂದಿದ್ದರು.

1935ರ ಗಾಂಧಿಯವರ ಉಪ್ಪಿನ ಸತ್ಯಾಗ್ರಹದ ದಂಡಿಯಾತ್ರೆ ಭಾರತದ ಪ್ರತಿ ಹಳ್ಳಿ ಹಳ್ಳಿಯಲ್ಲಿ ಹೊಸ ರಾಷ್ಟ್ರೀಯ ಭಾವನೆ "ಮಾಡು ಇಲ್ಲವೆ ಮಡಿ" ಮೂಡಿಸಿದ್ದ ಕಾಲ ಗಾಂಧಿಜಿಯವರ ಆದರ್ಶ ಚಂದ್ರಶೇಖರರಿಗೆ ಹೊಸ ಸ್ಪೂರ್ತಿ ನೀಡಿತು.

ಪಾಟೀಲರು ಪ್ರಾಂಜಲ ಮನಸ್ಥಿತಿಯವರಾಗಿದ್ದು, ತರುಣ ಸಂಘದ ಶುಭೋದಯಕ್ಕೆ ಕಾರಣರಾದರು ಸಂಘದ ಸದಸ್ಯರಿಗೆಲ್ಲ ಚಂದ್ರಣ್ಣನೆ ಆರಾಧ್ಯದೈವ ಮುಂದೆ 'ವಂದೆ ಮಾತರಂ' ಚಳುವಳಿಯಲ್ಲಿ ಭಾಗವಹಿಸಿ ಸಮರ್ಥ ನಾಯಕರಾದರು. ನಾಡಿಗೆ ನಾಯಕರಾದರೂ ಕಾಯಕ ಮಾತ್ರ ಅವಿಶ್ರಾಂತವಾಗಿತ್ತು ಅವರು ನಿಸ್ವಾರ್ಥ ನಾಯಕರಾಗಿ, ಕರ್ಪೂರದಂತೆ ಕರಗಿದರು.

## ಚಂದ್ರಶೇಖರ ಪಾಟೀಲರ ಬಗ್ಗೆ ಬುದ್ದಿಜೀವಿಗಳ ಅಭಿಪ್ರಾಯಗಳು:

ಮಹಾಬಳೇಶ್ವರಪ್ಪ: ಹೈದ್ರಾಬಾದ ಕರ್ನಾಟಕ ಇತಿಹಾಸದಲ್ಲಿ ಚಂಪಾ ಒಂದು ಬೆಳ್ಳಿಚುಕ್ಕಿ.

ಪಾಪು: ಉನ್ನತವಾದ ವ್ಯಕ್ತಿತ್ವ ನಾಯಕನೆಂದರೆ ಇವರೆ ಚಂದ್ರಶೇಖರ ರಂತೆ' ಇರಬೇಕು ಎನ್ನುವ ಭಾವನೆ.

ಎಸ್.ನಿಜಲಿಂಗಪ್ಪನವರ ಬಲಗೈ ಭಂಟರಾಗಿದ್ದ ಚಂದ್ರಶೇಖರ ಕುರಿತು ನಿಜಲಿಂಗಪ್ಪನವರು: ಚಂದ್ರಶೇಖರ ಪಾಟೀಲರ ಹೆಸರೆತ್ತಿದರೆ ನನ್ನ ಅಂತಃಕರಣ ಕರಗುತ್ತದೆ. (ಅಂತರಾಳದ ಮಾತು)

ಡಾ. ಅಪ್ಪಾಜಿ ಯವರು: ಪ್ರಸ್ತಾಪಿಸಿ ಸ್ವಾತಂತ್ರ ಏಕೀಕರಣಕ್ಕೆ ತುಂಬಾ ಕೆಲಸ ಮಾಡಿದರು.ಎಸ್ ನಿಜಲಿಂಗಪ್ಪ ಅವರ ಬಲಗೈ ಅಂತ ಅವ್ರು ಮುಖ್ಯಮಂತ್ರಿಯಾಗಲಿಕ್ಕೆ ಈ ಭಾಗದಿಂದ ಬೆಂಬಲ ಮಾಡಿದವರಲ್ಲಿ ಚಂದ್ರಶೇಖರ ಪಾಟೀಲರು ಒಬ್ಬರು ಒಳ್ಳೆಯ ವ್ಯಕ್ತಿತ್ವ ನಾನು ಕರ್ನಾಟಕದಲ್ಲಿ ಅಂತ ನಿಲುವಿನ ರಾಜೀಕಿಯ ವ್ಯಕ್ತಿಯನ್ನು ನೋಡಿಲ್ಲ

ರಾಮಕೃಷ್ಣ ಹೆಗ್ಗಡೆ : ಕರ್ನಾಟಕದ ಏಕೀಕರಣ ಆಯ್ತು ಹೈದ್ರಾಬಾದ ಕರ್ನಾಟಕದ ನಾಲ್ಕು ಜನರ ಪರಿಚಯ ಆವತ್ತೆ ಅದದ್ದು ಚಂದ್ರಶೇಖರ ಪಾಟೀಲ ವಿರೇಂದ್ರ ಪಾಟೀಲ ಮಹ್ಮದ ಅಲ್ಲಿ ಜಗನ್ನಾಥ'ರಾವ ಚಂದ್ರಕಿ

ಚಂದ್ರಶೇಖರ ಪಾಟೀಲರ ಪತ್ನಿ ಲಲಿತಾಬಾಯಿ: ಫಸ್ಟಕ್ಲಾಸ್ ಫಸ್ಟ್ ಛಾನ್ಸ್ ಫಸ್ಟ್ ಕ್ಲಾಸ್ ಬರೋರ ಬಗ್ಗೆ ಓದಿಸಬೇಕು ಮುಂದೆ ತರಬೇಕು ಅನ್ನೋರು ಫಸ್ಟ್ ಕ್ಲಾಸ್ ಬಂದವರನ್ನು ಮನೆಗೆ ಕರೆದುಕೊಂಡು ಅವರಿಗೆ ಊಟ ಕೊಡಿಸಿ ಸ್ವೀಟಕೊಡಿಸಿ ಅವರನ್ನು ಬಾಳೆಂಬ ಬೆಟ್ಟಕ್ಕೆ ಹ'ತ್ತಿಸಲು ಕಷ್ಟಪಟ್ಟರು.

ಚಂದ್ರಶೇಖರ ಪಾಟೀಲರು ಆನೆ ಖೆಡ್ಡ ನೋಡಲು ಹೋಗಿ ಬರುವಾಗ ಬಸ್ಸ್ ಅಫಘಾತ ಸಂಬಂವಿಸಿತು. ಅವರು ದಿನಾಂಕ 22.12.19960 ಬುಧವಾರ ಮಧ್ಯರಾತ್ರಿ ಅವರ ಚೈತನ್ಯ ಪಕ್ಷಿ ಹಾರಿ ಶರಣ ಸಾನಿಧ್ಯ ಸೇರಿತು. ಅವರ ಮರಣ ಅಕಾಲಿಕ ಅನಿರಿಕ್ಷಿತ.

## ಬಸಪ್ಪಾ ದಾನಪ್ಪ ಜತ್ತಿ

ದಿನಾಂಕ: 10.09.1952 ರಲ್ಲಿ ಜತ್ತಿಯವರು ಕನ್ನಡಿಗ ಲಿಂಗಾಯತ ಕುಟುಂಬದಲ್ಲಿ ಜನಿಸಿದರು. ಇಂದಿನ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಸಾವಳಗಿ ಎಂಬ ಗ್ರಾಮದ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿ ಕೌಟುಂಬಿಕ ಸಮಸ್ಯೆಗಳಲ್ಲಿಯೇ ತಮ್ಮ ಶಿಕ್ಷಣವನ್ನು ಪಡೆದು ತಮ್ಮ ಕೋಲ್ಲಾಪೂರ ರಾಜಾರಾಂ ಕಾಲೇಜಿನಿಂದ 'ಲಾ' ಪದವಿಯನ್ನು ಪಡೆದು ತಮ್ಮ ತವರೂರು ಜಮಂಡಿಯಲ್ಲಿಯೇ ವಕೀಲಿ ವೃತ್ತಿಯನ್ನು ಆರಂಭಿಸಿದರು.

1940ರಲ್ಲಿ ರಾಜಕೀಯಕ್ಕೆ ಧುಮುಕಿ ಜಮಖಂಡಿ ಪುರಸಭೆಯ ಸದಸ್ಯರಾದರು 1945ರಲ್ಲಿ ಅದರ ಅಧ್ಯಕ್ಷರಾದರು. ಜಮಖಂಡಿ ರಾಜರ ಆಡಳಿತ ಪ್ರಾಂತ ಆ ಪ್ರಾಂತದ ಶಾಸನ ಸಭೆಯ ಸದಸ್ಯರಾದರು ಮುಂದೆ ಆ ರಾಜ್ಯಾಡಳಿತ ಪ್ರದೇಶದ 'ದಿವಾನ' ಮುಖ್ಯಮಂತ್ರಿಯಾದರು ಅಲ್ಲಿನ ರಾಜ ಶಂಕರರಾವ ಪಟವರ್ಧನ ಅವರೊಂದಿಗೆ ನಿಕಟ ಸಂಭಂಧ ಹೊಂದಿದ್ದರು

1948ರಲ್ಲಿ ಜಮಖಂಡಿ ಪ್ರಾಂತ ಬಾಂಬೆ ರಾಜ್ಯದಲ್ಲಿ ವಿಲೀನವಾಗಿ ಬಾಂಬೆ ರಾಜ್ಯದ ಶಾಸಕಾಂಗ ಸದಸ್ಯರಾಗಿ ನೇಮಕಗೊಂಡರು. 1952ರಲ್ಲಿ ಸಾರ್ವತ್ರಿಕ ಚುನಾವಣೆಗಳ ನಂತರ ಬಾಂಬೆ ಸರಕಾರದಲ್ಲಿ ಆರೋಗ್ಯ & ಕಾರ್ಮಿಕ ಮಂತ್ರಿಗಳಾದರು.

ಮುಂದೆ ಪುನರ್ ವಿಂಗಡಣೆಯ ನಂತರ ಮೈಸೂರು ರಾಜ್ಯ ವಿಧಾನಸಭೆಯ ಸದಸ್ಯರಾದರು ಮೈಸೂರು ರಾಜ್ಯದ ಮುಖ್ಯಮಂತ್ರಿಯೂ ಆದರು ನಂತರ ರಾಷ್ಟ್ರೀಯ ರಾಜಕಾರಣದಲ್ಲಿ ಸಕ್ರೀಯವಾಗಿ ಭಾಗವಹಿಸಿದರು.

1968–1972ರಲ್ಲಿ ಓರಿಸ್ಸಾ ಹಾಗೂ ಪಾಂಡಿಚೇರಿ ರಾಜ್ಯಪಾಲರಾಗಿ, 1974 ರಲ್ಲಿ ದೇಶದ ಉನ್ನತ ಹುದ್ದೆಗೇರಿ ಭಾರತದ ಉಪ ರಾಷ್ಟ್ರಪತಿ ಫಖುರುದ್ಧೀನ ಅಲಿ ಅಹ್ಮದ ತಿರಿದ ನಂತರ ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸಿದರು.

1946 ರಲ್ಲಿ ಜತ್ತಿಯವರು ಬಸವ ಸಮೀತಿಯನ್ನು ಹುಟ್ಟುಹಾಕಿ ಅದರ ಸಂಸ್ಥಾಪಕ ಅಧ್ಯಕ್ಷರಾದರು ಸಮಿತಿ ಇಂದಿಗೂ ಕೂಡಾ ಸಕ್ರಿಯಾವಾಗಿ ಅನೇಕ ಶರಣ ಸಂಗಮ ಕಾರ್ಯಕ್ರಮದಲ್ಲಿ ತೊಡಗಿರುವುದು ನಾವು ನೋಡುತ್ತಿದ್ದೇವೆ.

ಶ್ರೀ ಜತ್ತಿಯವರು ಭಕ್ತಿ ಭಂಡಾರಿ ಬಸವಣ್ಣನವರಂತೆ ಮಹಾದಾಸೋಹಿ ಶರಣರಬಸವರ ಭಕ್ತರು ಆಗಿದ್ದರು ಅವರಿಗೆ ಮಹಾದಾಸೋಹ ಪೀಠ, ಪೂಜ್ಯ ಡಾ.ಅಪ್ಪಾಜಿಯವರ ಬಗೆಗೆ ಅಪಾರವಾದ ಗೌರವದ ಭಾವವಿದ್ದಿತು. ಕನ್ನಡದ ಪುತ್ರರಾದ ಅವರಿಗೆ ಮಹಾದಾಸೋಹ ಪೀಠದ ಮಹಿಮೆ ಸರಿಯಾಗಿ ತಿಳಿದಿತ್ತು.

ಅವರು ಮಹಾದಾಸೋಹ ಪೀಠದ ಕಾರ್ಯಕ್ರಮಗಳಲ್ಲಿ ಹಲವಾರು ಸಲ ಭಾಗವಹಿಸಿದ್ದುಂಟು ಸಮಾರಂಭದಲ್ಲಿ ಅವರು ಮಾತನಾಡುತ್ತ, ಈ ನೆಲದಲ್ಲಿ ದಾಸೋಹ ಮೂರ್ತಿ ಶರಣಬಸವರು ಹುಟ್ಟಬಂದ ಕಾರಣದಿಂದ ಮತ್ತೊಮ್ಮೆ ಇಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ಭಕ್ತಿ ದಾಸೋಹ ಬೆಳಕು ಪ್ರಖರವಾಗಿ ಬಿದ್ದಂತಾಗಿದೆ. ಎಂದು ಹೇಳಿದರು.

ಮುತ್ಸದ್ದಿ ನಾಯಕರರಾದ ಬಸಪ್ಪ ದಾನಪ್ಪ ಜತ್ತಿಯವರ ಆ ಮಹಾನ್‌ಚೇತನ 07–06–2002 ರಲ್ಲಿ ಆ ಭಗವಂತನಲ್ಲಿ ಲೀನವಾಯಿತು.

## ವೀರೇಂದ್ರ ಪಾಟೀಲ:

1924 ರಲ್ಲಿ ಗುಲಬರ್ಗಾ ಚಿಂಚೋಳಿಯ ಹುಡದಳ್ಳಿ ಎಂಬ ಪುಟ್ಟ ಕುಗ್ರಾಮ ಮಧ್ಯಮ ವರ್ಗದ ಲಿಂಗಾಯತ ಸಮುದಾಯದಲ್ಲಿ ಜನಿಸಿದರು. ನಂತರ ಚಿಂಚೋಳಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ನಂತರ ಗುಲಬರ್ಗಾದ ಆಸೀಫಗಂಜ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆಯುವಾಗ 'ವಂದೇ ಮಾತರಂ' ಚಳುವಳಿಯಲ್ಲಿ ಭಾಗಿಯಾದ ಕಾರಣ ತಪ್ಪೊಪ್ಪುಕೊಳ್ಳದ ಕಾರಣ ಶಾಲೆಯಿಂದ ಹೊರಕ್ಕೆದೂಡಲ್ಪಡುತ್ತಾರೆ.

ಮುಂದೆ ಹೈದರಾಬಾದನ ವಿವೇಕ ವರ್ಧಿನಿ ಶಾಲೆಗೆ ಸೇರ್ಪಡೆಯಾಗಿ 10ನೇ ತರಗತಿಯಲ್ಲಿ ಫೇಲ್‌ಆಗಿ ನಂತರ ಪಾಸಾಗಿ ಇಂಟರಮಿಡಿಯೆಟ್ ಅಭ್ಯಸಿಸಿ ನಂತರ ಉಸ್ಮಾನಿಯ ವಿಶ್ವವಿಧ್ಯಾಲಯದಿಂದ ಃಂ ಐಐಃ ಪದವಿಯನ್ನು ಪಡೆಯುತ್ತಾರೆ.

ಅನೇಕ ಸಲ ಚಿಂಚೋಳಿ ಕ್ಷೇತ್ರವನ್ನು ಪ್ರತಿನಿಧಿಸಿ 1957ರಲ್ಲಿ ಎಸ್ ನಿಜಲಿಂಗಪ್ಪನವರ ಸರ್ಕಾರದಲ್ಲಿ ಗೃಹ ಮಂತ್ರಿಯಾಗಿ ಕಾರ್ಯ ನಿರ್ವಾಹಿಸಿದರು. ರಾಮಕೃಷ್ಣ ಹೆಗ್ಗಡೆ ಮತ್ತು ವಿರೇಂದ್ರ ಪಾಟೀಲ ನಿಜಲಿಂಗಪ್ಪನವರ ಸರಕಾರದ ಯುವ ಉತ್ಸಾಹಿ ಮಂತ್ರಗಳಾಗಿ 'ಲವಕುಶ' ಎಂದು ಹೆಸರು ಪಡೆದಿದ್ದರು.

ಮುಂದೆ ನಿಜಲಿಂಗಪ್ಪನವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಕಾರಣ ಅವರು ವೀರೇಂದ್ರ ಪಾಟೀಲರನ್ನು ತಮ್ಮ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿಯಾಗಿ ನೇಮಿಸಿದರು.

ವೀರೇಂದ್ರ ಪಾಟೀಲರು ನಿಜಲಿಂಗಪ್ಪನವರ ಮೌಲ್ಯಧಾರಿತ ರಾಜಕೀಯದ ಮಾದರಿಯ ದಕ್ಷ ಪ್ರಾಮಾಣಿಕ ಆಡಳಿತಗಾರಾಗಿ ನಿಜಲಿಂಗಪ್ಪನವರು ಹಾಕಿಕೊಂಡ ಅನೇಕ ಯೋಜನೆಗಳನ್ನು ಪೂರ್ಣಗೊಳಿಸಿ ಕರ್ನಾಟಕದ ಅಭಿವೃದ್ಧಿಗೆ ರಾಜಕೀಯಕ್ಕೆ ಮಾದರಿ ಮುತ್ಸದ್ಧಿ ನಾಯಕರಾದರು.

ಕರ್ನಾಟಕ ಮುಖ್ಯಮಂತ್ರಿಗಳಾಗಿ ರಾಜಕೀಯದಲ್ಲಿ ಅಪಾರ ಅನುಭವ ಹೊಂದಿದ್ದ ಸನ್ಮಾನ್ಯ ಪಾಟೀಲರು ಶರಣರಬಸವೇಶ್ವರ ಸಂಸ್ಥೆಯೊಂದಿಗೆ ಆತ್ಮೀಯ ಸಂಭಂಧ ಹೊಂದಿದ್ದರು ಪೂಜ್ಯ ದೊಡ್ಡಪ್ಪ ಅವರ ಬಗೆಗೆ ಅಪಾರ ಭಕ್ತಿ ಹೊಂದಿದ್ದರು. ಪೂಜ್ಯ ಡಾ. ಅಪ್ಪಾಜಿಯವರ ಬಗೆಗೆ ಗೌರವದ ಭಾವವಿದ್ದಿತು ಮಹಾದಾಸೋಹಪೀಠದ ಸಂಘದ ಶೈಕ್ಷಣಿಕ ಸಮಾರಂಭವೆ ಇರಲಿ ಏನೆ ಇದ್ದರು ಪಾಟೀಲರು ಕರೆದುಕೂಡಲೇ ಹಂಬಲಿಸಿ ಬರುತ್ತಿದ್ದರು, ಆದ್ದರಿಂದ ಶರಣ ಬಸವೇಶ್ವರ ಮಹಾದಾಸೋಹ ಮನೆಯ ಮಗನೆಂದು ಹೇಳಿಕೊಳ್ಳುವಲ್ಲಿ ಅವರಿಗೆ ಆತ್ಮೀಯ ಹೆಮ್ಮೆ ಇದ್ದಿತು. ಅನಾರೋಗ್ಯದಿಂದ 1991ರಲ್ಲಿ ಅನಾರೋಗ್ಯ ಪೀಡಿತರಾಗಿ ನಂತರ 1997ರಲ್ಲಿ ನಿಧನರಾದರು.

## ಶ್ರೀ ಶಿವರಾಜ ವಿಶ್ವನಾಥ ಪಾಟೀಲ ಚಾಕುರಕರ್

ಪಾಟೀಲರು 12.10.1935 ರಂದು ಮರಾಠವಾಡ ಪ್ರದೇಶದ ಲಾತೂರ ಜಿಲ್ಲೆಯ 'ಚಾಕೂರ' ಎಂಬ ಹಳ್ಳಿಯಲ್ಲಿ ಲಿಂಗಾಯತ ಕುಟುಂಬದಲ್ಲಿ ಜನಿಸಿದರು. ಅವರು ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಪದವಿ ಪಡೆದು ಬಾಂಬೆ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು 1967–69 ರಲ್ಲಿ ಪಡೆದರು. ಪುರಸಭೆಯ ಸದಸ್ಯರಾಗಿ ಸ್ಥಳೀಯ ರಾಜಕೀಯದಲ್ಲಿ ಸಕ್ರಿಯವಾಗಿ ನಂತರ ರಾಜ್ಯ ರಾಜಕೀಯ ಪ್ರವೇಶ ಪಡೆದು 1973–1980 ರಲ್ಲಿ ಲಾತೂರ ಗ್ರಾಮೀಣ ಪ್ರದೇಶ ಕ್ಷೇತ್ರದಿಂದ ಮಹಾರಾಷ್ಟ್ರ ವಿಧಾನಸಭೆಗೆ ಸದಸ್ಯರಾದರು, ನಂತರ ಮಂತ್ರಿಗಳಾಗಿ ಶಾಸನ ಸಭೆಯ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

1980ರಲ್ಲಿ ರಾಷ್ಟ್ರರಾಜಕಾರಣಕ್ಕೆ ಲೋಕಸಭೆಗೆ ಲಾತೂರ ಕ್ಷೇತ್ರದಿಂದ ಸ್ಪರ್ಧಿಸಿ ನಂತರ 7 ಬಾರಿ ನಿರಂತರವಾಗಿ ಆಯ್ಕೆಯಾಗಿ ಇಂದಿರಾಗಾಂಧಿ ಮಂತ್ರಿಮಂಡಲದಲ್ಲಿ ರಕ್ಷಣಾಮಂತ್ರಗಳಾಗಿ 1982–83 ವಿಜ್ಞಾನ ತಂತ್ರಜ್ಞಾನ ಅಣುಶಕ್ತಿ ಖಾತೆಯಲ್ಲಿ ಕಾರ್ಯನಿರ್ವಾಹಿಸಿ ನಂತರ ರಾಜೀವಗಾಂಧಿ ಸರಕಾರದಲ್ಲಿ ವಿಮಾನಯಾನ ಮಂತ್ರಿಯಾಗಿ ದಕ್ಷವಾಗಿ ಕಾರ್ಯನಿರ್ವಹಿಸಿದರು. 1992ರಲ್ಲಿ ಶ್ರೇಷ್ಠ ಸಂಸದೀಯ ಪಟು ಎಂಬ ಗೌರವಕ್ಕೆ ಭಾಜನರಾದರು. ನಂತರ ಲೋಕಸಭೆಯ ಸಭಾಧ್ಯಕ್ಷರಾಗಿ ಹೆಸರು ಪಡೆದರು. 2004 ರಲ್ಲಿ ಚುನಾವಣೆಯಲ್ಲಿ ಸೋತು ರಾಜ್ಯಸಭೆಗೆ ಆಯ್ಕೆಯಾಗಿ ಗೃಹಮಂತ್ರಿಯಾಗಿ ಕಾರ್ಯ ನಿರ್ವಹಿಸಿದರು.

ಪರಮಪೂಜ್ಯ ಡಾ. ಅಪ್ಪಾಜಿಯವರು ದೆಹಲಿಯ ಪಾಲಿಮೆಂಟ್ ಮುಂದೆ ಮಹಾತ್ಮ ಬಸವಣ್ಣನವರ ಸ್ಥಾಪಿಸಲು ಪ್ರಮುಖ ಕಾರಣಕರ್ತರಾದರು. ವೀರಶೈವ ಸಮಾಜ ಡಾ. ಅಪ್ಪಾಜಿಯವರಿಗೆ ಕೃತಜ್ಞತೆ & ಅಭಿನಂದನೆ ಸಲ್ಲಿಸಲು ಕಲಬುರ್ಗಿಯಲ್ಲಿ ಬೃಹತ್ ಸಮಾರಂಭವನ್ನು ಆಯೋಜನೆ ಮಾಡಿತು. ಅದಕ್ಕೆ ಅತಿಥಿಗಳಾಗಿ ರಾಜ್ಯಪಾಲ ಚತುರ್ವೇದಿ ಕೇಂದ್ರ ಗೃಹ ಮಂತ್ರಿ. ಶಿವರಾಜ ಪಾಟೀಲರನ್ನು ಆಮಂತಿಸಲಾಗಿತ್ತು. ಪಾಟೀಲು ಅಪ್ಪಾಜಿಯವರಿಗೆ ಭಕ್ತಿಯ ಅಭಿನಂದನೆ ಸಲ್ಲಿಸಿ ಮಾತನಾಡಿ; ದೆಹಲಿಯ ವರೆಗೆ ಬಸವಣ್ಣನವರಾಗಲಿ ಅವರ ಸಿದ್ದಾಂತಗಳಾಗಲಿ ಸರಿಯಾಗಿ ಪರಿಚಯವಿರಲಿಲ್ಲ. ಪೂಜ್ಯ ಡಾ. ಅಪ್ಪಾಜಿಯವರು ಪ್ರತಿಮೆ ಸ್ಥಾಪನೆ ಮುಖಾಂತರ ಬಸವಣ್ಣನವರಿಗೆ ದೆಹಲಿಯ ಪರಿಚಯ ಮಾಡಿಸಿದ್ದಾರೆ. ಇದು ಬಹು ದೊಡ್ಡ ಸಾಧನೆ ಎಂದರು.

## ಎಸ್ ಮಲ್ಲಿಕಾರ್ಜುನಯ್ಯ

ಜೀವನ ಎಸ್ ಮಲ್ಲಿಕಾರ್ಜುನಯ್ಯನವರು 26–06–1931 ರಲ್ಲಿ ತುಮಕೂರಿನಲ್ಲಿ ಜನಸಿದರು ಇವರು ತುಮಕೂರ ಕ್ಷೇತ್ರದಿಂದ ಲೋಕಸಭೆಗೆ ಒಟ್ಟು ಮೂರುಸಲ ಅಂದರೆ, 1991, 1998, 2004ರಲ್ಲಿ ಆಯ್ಕೆಯಾಗಿದ್ದರು ತುಮಕೂರಿನ ಶಾಸಕರಾಗಿ ರಾಜಕೀಯ ಜೀವನ ಪ್ರಾರಂಭಸಿದ ಮಲ್ಲಿಕಾರ್ಜುನಯ್ಯಾ 1980–86ರವರೆಗೆ ರಾಜ್ಯ ವಿಧಾನ ಪರಿಷತ್ತಿನ ಉಪಸಭಾಪತಿಯಾಗಿ ಮತ್ತು ರಾಜ್ಯದ ಬಿ.ಜೆ.ಪಿ ಅಧ್ಯಾಕ್ಷರಾಗಿ ಕಾರ್ಯನಿರ್ವಹಿಸಿದರು ಇವರು ಲೋಕಸಭೆಯ ಸಭಾಪತಿಗಳಾಗಿದ್ದ ಸಂಧರ್ಭದಲ್ಲಿ ಅಪ್ಪಾಜಿಯವರು ದೆಹಲಿಯ ಪಾರ್ಲಿಮೆಂಟನ ಮುಂಭಾಗದಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪಿಸಬೇಕೆಂದು ಯೋಜನೆ ಹಾಕಿಕೊಂಡಾಗ ಅಂತಹದೆ ಬಯಕೆಯನ್ನು ಅಭಿವ್ಯಕ್ತಿಸಿ ಕಾರ್ಯಪೂರೈಕೆಗೆ ಚಾಲಕ ಶಕ್ತಿಯಾಗಿ ನಿಂತು ಕೊಂಡುವರು ಪೂಜ್ಯ ಡಾ॥ಅಪ್ಪಾಜಿಯವರು ಮಹಾದಾಸೋಹದ ಪೀಠದ ಸಮಾರಂಭಕ್ಕೆ ಬರಮಾಡಿಕೊಂಡು ಶರಣ ರಜತ ಪ್ರತಿಮೆಯನ್ನಿತ್ತು ಸತ್ಕರಿಸಿದರು ಸರ್ಕಾರ ಸ್ವಿಕರಿಸಿ ಮತನಾಡುತ್ತ ಪೂಜ್ಯ ಅಪ್ಪನವರು ಬಸವಣ್ಣನವರ ಪ್ರತಿಮೆ ದೆಹಲಿಯಲ್ಲಿ ಸ್ಥಾಪಿಸಿ ಅಪೂರ್ವ ಕಾರ್ಯ ಮಾಡಿದ್ದಾರೆ ಅದಕ್ಕಾಗಿ ಕನ್ನಡ ನಾಡಿನ ಜನರೆಲ್ಲರು ಪೂಜ್ಯ ಅಪ್ಪಾ ಅವರಿಗೆ ಅಭಿನಂದಿಸಬೇಕು ಬಸವಣ್ಣ ಕೇವಲ ಕನ್ನಡ ನಾಡಿನ ವ್ಯಕ್ತಿಯಲ್ಲ ಅವನು ಭಾರತೀಯನು ಹೌದು ಆದುದರಿಂದ ಭಾರತೀಯರ ಅಭಿವಂದನೆಗೂ ಪೂಜ್ಯ ಅಪ್ಪಾ ಅವರು ಭಾಜನರಾಗತ್ತಾರೆ ಅಪ್ಪ ಅವರ ಅರ್ಶಿವಾದ ಯಾವಾಗಲು ನನ್ನ ಮೇಲೆ ಇರಲಿ ಎಂದು ಪ್ರಾರ್ಥಿಸಿದರು.

## ಜೆ.ಎಚ್‌ಪಟೇಲರು

ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜೆ.ಎಚ್. ಪಾಟೇಲರು ಬಹು ನಿಷ್ಠುರ ಮತ್ತು ದಕ್ಷ ವ್ಯಕ್ತಿಗಳು ಯಾರ ಮೂಲಾಜು ಹಿಡಿಯದ ಯಾರ ಭಿಡೆಗೂ ಒಳಗಾಗದ ಸ್ವಭಾವ ಅವರದು ಕಲಬುರ್ಗಿಗೆ ಬಂದಾಗ ಶ್ರೀ.ಪಟೇಲರು, ಮಹಾದಾಸೋಹ ಶರಣಬಸವರ ದರ್ಶನ ಪೂರೈಸಿಕೊಂಡು ಪೂಜ್ಯ ಡಾ॥ ಅಪ್ಪಾಜಿಯವರೊಂದಿಗೆ ಹಲವಾರು ಪ್ರಚಲಿತ ವಿದ್ಯಮಾನಗಳನ್ನು ಕುರಿತು ಚರ್ಚಿಸಿದರು ಪೂಜ್ಯ ಅಪ್ಪ ಅವರು ಪಟೇಲರಿಗೆಶರಣಬಸವೇಶ್ವರ ಪ್ರತಿಮೆಯನ್ನು ನೀಡಿ ಅಶಿರ್ವಾದಗೈದರು ಜೆ.ಎಚ್.ಪಟೇಲ ಅಪ್ಪಾ ಅವರೊಡನೆ ಮಾತನಾಡುತ್ತಾ ಇದೋಂದು ನಿಜವಾದ ಸಮಾಜವಾದ ಸಿದ್ದಾಂತ ತರಬೇತಿ ಶಾಲೆಯಂತಿದೆ ಎಂದು ನುಡಿದರು.

ಇವರು 1930 ರಲ್ಲಿ ಅಕ್ಟೋಬರ್ 1 ರಂದು ಪ್ರಸ್ತುತ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಕಾರಿಗಿನೂರ ಗ್ರಾಮದಲ್ಲಿ ಲಿಂಗಾಯತ ಕುಟುಂಬದಲ್ಲಿ ಜನಿಸಿದರು. ಕಾನೂನು ಪದವಿಧರರಾದ ಜಯದೇವಪ್ಪ ಹಾಲಪ್ಪ ಪಟೇಲರು ಕರ್ನಾಟಕ ರಾಜ್ಯದ 15ನೇ ಮುಖ್ಯಮಂತ್ರಿಯಾಗಿ 1996 ರಿಂದ 1999ರ ವರೆಗೆ ಸೇವೆ ಸಲ್ಲಿಸಿದ್ದಾರೆ. ಇವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದರು. ಕೊಡಗು ಸತ್ಯಗ್ರಹದಲ್ಲಿ ಭಾಗವಹಿಸಿದ್ದರಿಂದ ತುರ್ತು ಪರಿಸ್ಥಿತಿಯ ಸಂಧರ್ಭದಲ್ಲಿ ಮತ್ತೆ ಜೈಲನ್ನು ಸೇರಿದರು.

1967 ರಲ್ಲಿ ಶಿವಮೊಗ್ಗದಿಂದ ಲೋಕಸಭೆಗೆ ಸ್ಪರ್ಧಿಸಿ ವಿಜಯಿಯಾದರು ಲೋಕಸಭೆಯ ಇತಿಹಾಸದಲ್ಲಿಯೇ ಮೊದಲು ಅವರು ಪ್ರಾದೇಶಿಕ ಭಾಷೆ ಕನ್ನಡದಲ್ಲಿ ಮಾತನಾಡಿ ಇತಿಹಾಸ ನಿರ್ಮಿಸಿದರು. 1978ರಲ್ಲಿ ಇವರು ತಮ್ಮ ತವರು ಜಿಲ್ಲೆಯ ಚನ್ನಗಿರಿ ತಾಲೂಕಿನಿಂದ ವಿಧಾನಸಭೆಗೆ ಆಯ್ಕೆಯಾದರು ಹೆಗ್ಗಡೆಯವರ ಮಂತ್ರಿ ಮಂಡಳದಲ್ಲಿ ಮಂತ್ರಿಯಾದರು. ಮುಂದೆ ಮುಖ್ಯಮಂತ್ರಿಯೂ ಆಗಿ ದಕ್ಷವಾಗಿ ಕಾರ್ಯ ನಿರ್ವಹಿಸಿದರು. ಪಟೇಲ್‌ರು ಒಳ್ಳೆಯ ಭಾಷಣಕಾರರಾಗಿ ಲೋಹಿಯಾರವರ ಸಮಾಜವಾದದ ಪ್ರತಿಪಾದಕರಾಗಿದ್ದರು. 12ನೇ ಡಿಸೆಂಬರ್ 2000 ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

## ಬಿ.ಎಸ್. ಯಡಿಯೂರಪ್ಪ

ಭೂಕನಕೆರೆ ಸಿದ್ದಲಿಂಗಪ್ಪಾ ಯಡಿಯೂರಪ್ಪ ಮಂಡ್ಯ ಜಿಲ್ಲೆ ಕೆ.ಆರ್ ಪೇಟ ಫೆಬ್ರುವರಿ 27 1943 ರಲ್ಲಿ ಭೂಕನಕೆರೆಯಲ್ಲಿ ಜನಿಸಿದರು. ಇವರ ತಂದೆ ತಾಯಿಗಳು ಯಡಿಯೂರ ಸಿದ್ದಲಿಂಗೇಶ್ವರ ಭಕ್ತರಾಗಿದ್ದು ಆ ಕಾರಣ ಯಡಿಯೂರಪ್ಪ ಎಂದು ಹೆಸರಿಟ್ಟರು. ಇವರು ನಾಲ್ಕು ವರ್ಷದವರಿರುವಾಗಲೇ ತಾಯಿಯನ್ನು ಕಳೆದುಕೊಂಡರು ಪ್ರಾಥಮಿಕ ಶಿಕ್ಷಣವನ್ನು ಭೂಕನಕೆರೆಯಲ್ಲಿ ಸಂಪಾದಿಸಿದರು. ನಂತರ ಮಂಡ್ಯದ ಪಿ.ಇ.ಎಸ್ ಕಾಲೇಜಿನಿಂದ ತಮ್ಮ ಪಿ.ಯು.ಸಿ ಶಿಕ್ಷಣವನ್ನು ಪಡೆದರು.

1965ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮೊದಲನೆ ದರ್ಜೆ ಸಹಾಯಕರಾಗಿ ಸೇವೆಗೆ ನೇಮಕಾತಿ ಹೊಂದಿದ್ದರು. ನಂತರ ತಮ್ಮ ಸಹಾಯಕನ ಹುದ್ದೆಯನ್ನು ತ್ಯಜಿಸಿ ಶಿವಮೊಗ್ಗ ಜಿಲ್ಲೆಯ ಶಿಖಾರಿಪುರಕ್ಕೆ ಹೋದರ. ಅಲ್ಲಿ ವೀರಭದ್ರ ಶಾಸ್ತ್ರಿಯವರ ಅಕ್ಕಿ ಗಿರಣಿಯಲ್ಲಿ ಕ್ಲರ್ಕ್‌ಆಗಿ ಸೇವೆಗೆ ಸೇರಿದರು. 1967 ರಲ್ಲಿ ಅಕ್ಕಿಗಿರಣಿ ಮಾಲಿಕರ ಮಗಳಾದ ಮೈತ್ರಾದೇವಿಯನ್ನು ಮದುವೆಯಾದರು. ನಂತರ ಅವರು ಒಂದು ಹಾರ್ಡ್‌ವೇರ್ ಶಾಪ್ ತೆಗೆದರು.

ವಿದ್ಯಾರ್ಥಿ ದೆಸೆಯಿಂದಲೂ ಖಖು ನೊಂದಿಗೆ ನಂಟು ಹೊಂದಿದ ಅವರು 1970ರಲ್ಲಿ ಸಂಘದ ಕಾರ್ಯದಶಿಯಾಗಿ ಶಿಖಾರಿಪುರ ಘಟಕ್ಕೆ ನೇಮಕಾತಿಯಾಗುವುದರ ಮೂಲಕ ಅವರ ಸಾರ್ವಜನಿಕ ಜೀವನ ಪ್ರಾರಂಭವಾಯಿತು.

1972ರಲ್ಲಿ ಅವರು ಶಿಖಾರಿಪುರದ ಪುರಸಭೆಗೆ ಆಯ್ಕೆಯಾಗಿ ಜನ ಸಂಘದ ತಾಲೂಕು ಘಟಕದ ಅಧ್ಯಕ್ಷರಾದರು. ತುರ್ತು ಪರಿಸ್ಥಿತಿಯಲ್ಲಿ ಅವರನ್ನು ಬಳ್ಳಾರಿ ಜೈಲಿನಲ್ಲಿಡಲಾಯಿತು. ಜೈಲಿನಿಂದ ಬಿಡುಗಡೆಯಾದ ನಂತರ ಶಿವಮೊಗ್ಗ ಜಿಲ್ಲೆಯ ಃಏಕ ಅಧ್ಯಕ್ಷರಾಗಿ ಆಯ್ಕೆಯಾದರು. 1983ರಲ್ಲಿ ಮೊದಲ ಶಿಖಾರಿಪುರದಿಂದ ರಾಜ್ಯ ವಿಧಾನಸಭೆಗೆ ಆಯ್ಕೆಯಾದರು.

ಇವರು ಶಿಖಾರಿಪುರ ಕ್ಷೇತ್ರದಿಂದ ಒಟ್ಟು 6 ಸಲ ಸದಸ್ಯರಾಗಿ ಆಯ್ಕೆಯಾದರು 1994 ರಲ್ಲಿ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು. 1999ರಲ್ಲಿ ಸೋತು ವಿಧಾನ ಪರಿಷತಗೆ ಆಯಕೆಯಾದರು ನಂತರ 2004 ರಲ್ಲಿ ಮತ್ತೆ ಆಯ್ಕೆಯಾಗಿ ವಿರೋಧ ಪಕ್ಷದ ನಾಯಕರಾದರು.

ನಂತರದಲ್ಲಿ ಃಏಕ ಮತ್ತು ಎಆಖ ನೇತ್ರತ್ವದ ಕುಮಾರಸ್ವಾಮಿ ಮತ್ತು ಯಡಿಯೂರಪ್ಪಾ ನವರ ಸಮ್ಮಿಶ್ರ ಸರಕಾರ 20/20 ತಿಂಗಳ ಅವಧಿಗಾಗಿ ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸುವ ಷರತ್ತಿನೊಂದಿಗೆ ಕುಮಾರಸ್ವಾಮಿಯವರು ಮೊದಲ 20 ತಿಂಗಳಿಗೆ ಮುಖ್ಯಮಂತ್ರಿಯಾದರು ನಂತರ 20 ತಿಂಗಳಿಗಾಗಿ ಯಡಿಯೂರಪ್ಪ ಮುಖ್ಯಮಂತ್ರಿಯಾದರು ಆದರೆ ದೇವೆಗೌಡ ಮತ್ತು ಕುಮಾರಸ್ವಾಮಿಯವರು ಬೆಂಬಲ ಸಿಗದ ಕಾರಣ ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಇಳಿದರು.

2008ರ ವಿಧಾನಸಭಾ ಚುನಾವಣೆಯಲ್ಲಿ ಯಡಿಯೂರಪ್ಪನವರು ಶಿಖಾರಿಪುರ ಕ್ಷೇತ್ರದಿಂದ ಪುನರಾಯ್ಕೆಯಾಗುವುದರೊಂದಿಗೆ, ದಕ್ಷಿಣಭಾರತದಲ್ಲಿ ಕಾಂಗ್ರೇಸೇತರ ಸರಕಾರ ರಚನೆಗೆ ಬಿಜೆಪಿ ಪಕ್ಷ ಒಂದು ಮೈಲಿಗಲ್ಲಾಯಿತು. ಮೇ30. 2008 ರಂದು ಯಡಿಯೂರಪ್ಪ ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವಿಕರಿಸಿ ಮುಖ್ಯಮಂತ್ರಿಯಾಗಿ ಅನೇಕ ಜನೋಪದೋಗಿ ಕಾರ್ಯಕ್ರಮಗಳನ್ನು ರೂಪಿಸಿದರು ಅವುಗಳಲ್ಲಿ ಭಾಗ್ಯಲಕ್ಷೀ ಯೋಜನೆ, ಬಡ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ, ಮಧ್ಯದ ಮೇಲೆ ನಿರ್ಬಂಧ ಇತ್ಯಾದಿ ಜನಪರ ಯೋಜನೆಗಳಿಂದ ದಕ್ಷ ಆಡಳಿತವನ್ನು ನಿರ್ವಹಿಸಿದರು.

ಸನ್ಮಾನ್ಯ ಬಿ.ಎಸ್ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗಲೆ ಪೂಜ್ಯ ಡಾ. ಅಪ್ಪಾಜಿಯವರ ದರ್ಶನ ಪಡೆದುಕೊಂಡು ತಮ್ಮ ಪಕ್ಷದ ಯಶಸ್ವಿಗಾಗಿ ಪ್ರಾರ್ಥಿಸಿ ಹೋಗಿದ್ದರು ಪೂಜ್ಯ ಅಪ್ಪನವರ ಆರ್ಶಿವಾದ ಫಲಿಸಿತು. ಮುಖ್ಯಮಂತ್ರಿಗಳಾದರು ನಂತರ ಯಡಿಯೂರಪ್ಪ ನವರು ಮತ್ತೋಮ್ಮೆ ಮಹಾದಾಸೋಹಿ ಶರಣಬಸವರ ದರ್ಶನ ಪಡೆಯಲೆಂದು ಭಕ್ತಿಯಿಂದ ಬಂದರು ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಆದರದಿಂದ ಗೌರವಿಸಿ ಆರ್ಶಿವದಿಸಿದರು.

ISSN 2454-7255 **Original Article** VOL 5|ISSUE 2|Mar-2015

Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org

# ಬಸವಣ್ಣನವರ ಕಾಲ ಮತ್ತು ವಂಶ ಕುರಿತು ಒಂದು ಐತಿಹಾಸಿಕ ಸಮೀಕ್ಷೆ

Prof. Malappa K. Bothogi
S.S.Margol. Degree College
Shahabad

## ಪ್ರಸ್ತಾವನೆ:

ಅಣ್ಣ ಬಸವಣ್ಣನವರನ್ನು ಭಕ್ತಿ ಭಂಡಾರಿ ಮಹಾ ಮಾನವತಾವಾದಿ ಜೀವಜಗತ್ತಿನ ಅಸಮಾನತೆಗಳನ್ನು ಹೊಗಲಾಡಿಸಲು ಹೋರಾಡಿದ ಸಮಾಜ ಸುಧಾರಕರಾಗಿದ್ದು, ಭಕ್ತಿಭಾಂಡಾರಿ ಮನುಕುಲ ಕಂಡ ಕೆಲವು ಅಪರೂಪದ ಸಂತರಲ್ಲಿ ಒಬ್ಬರು ಮಹಾಶಕ್ತಿ ಜ್ಞಾನಿ ಮಹಾನ ಚೇತನ ಮಾನವೀಯ ಅಂತಃಕರಣದ ಸ್ಫೂರ್ತಿ ಬೆಳಗಿನೊಳಗಿನ ಮಹಾಬೆಳಕು ಅಣ್ಣ ಬಸವಣ್ಣನವರು ಎಲ್ಲರು ಸಮಾನರು ಸಾಮರ್ಥ್ಯಕ್ಕೆ ತಕ್ಕ ಅವಕಾಶ ಹಾಗೂ ಗೌರವಗಳನ್ನು ನೀಡಿದ ಋಗ್ವೇದ ಕಾಲದಂತಹ ಸಮಾಜ ಕಂಡ ಭಾರತ ವರ್ಷ ಸ್ವಾರ್ಥಿಗಳ ಕಪಿ ಮುಷ್ಟಿಗೆ ಸಿಲುಕಿ ತನ್ನ ಅಂತಸತ್ವ ಕಳೆದುಕೊಂಡಾಗ ಪುನಃ 5 ಸಾವಿರ ವರ್ಷಗಳ ನಂತರ ನಾಗರಿಕತೆಯ ಸೊಂಕಿನಲ್ಲಿ ಬೆಳೆಯುತ್ತಿರುವ ಕ್ರೂರ ವ್ಯವಸ್ಥೆಯನ್ನು ಧಿಕ್ಕರಿಸಿ ಸಮಾನತೆಯ ತತ್ವಭೋದಿಸಿದೆ ಮಾನವರು ಪರಸ್ಪರು ಪ್ರೀತಿಸುವಂತೆ ಮಾಡಿದ ಜಗತ್ತಿನ "Religious parliament" ಮೊದಲ ಧರ್ಮ ಸಭೆಯ ಆಯೋಜನೆ ಮಾಡಿದ ಅರಿವಿನ ಮನೆಯೇ ಅನುಭವ ಮಂಟಪ ಈ ಜ್ಞಾನ ಜ್ಯೋತಿ ಇಡೀ ಮನುಕುಲ ದಾರಿ ದೀರ್ಘವಾಗಿದೆ. ಆದ್ದರಿಂದ ಇಂದು ಬಸವಣ್ಣನವರನ್ನು " ಯುಗದ ಉತ್ಸಾಹ" ಎಂದು ಅಲ್ಲಮ ಪ್ರಭುಗಳು ಮನದುಂಬಿ ಹೊಗಳಿದು ಸತ್ಯವಾಗಿದೆ. ಅವರ ವಿಚಾರಗಳು ಸದಾಕಾಲದಲ್ಲಿ ಚೈತನ್ಯ ಶೀಲವಾಗಿರುವಂತಹವು. ಜಗತ್ತಿನಲ್ಲಿ ಹಲವಾರು ಕ್ರಾಂತಿಗಳಾಗಿವೆ. ಆದರೆ ಬಸವಣ್ಣನವರದ್ದು ಲೋಕ ಕಲ್ಯಾಣಕ್ಕಾಗಿ ನಡೆದ ಸಮಾನತೆಯ ಚಳುವಳಿಯಾಗಿದೆ. ಅವರ ಈ ಕ್ರಾಂತಿಯಲ್ಲಿ 196.00 ಶರಣರು 770

ಜನ ಅಮರ ಗಣಂಗಳು, 300 ಜನ ವಚನಕಾರರು. 60 ಜನ ಮಹಿಳಾ ಚಳುವಳಿ ಇವರೆಲ್ಲರು ಬೇರೆ ಬೇರೆ ಸಮುದಾಯದವರು.

ಈ ವೈಚಾರಿಕ ಸಮಾವೇಶದ ಪ್ರತಿಫಲವೇ ದೀನದಲಿತರ ಬಡವರು, ಅಬಲೇ ಮಹಿಳೆಯರು, ಸಾಮಾಜಿಕ ಧಾರ್ಮಿಕ, ವೈಜ್ಞಾನಿಕ ಶಿಕ್ಷಣದ ಆರ್ಥಿಕ, ಹಾಗೂ ಸಾಹಿತ್ಯಿಕ ಕ್ಷೇತ್ರದಲ್ಲಿ ಆದ ಗಮನಾರ್ಹ ಬದಲಾವಣೆಗಳಿಂದ ಸಾಮಾಜಿಕ ಆಂದೋಲನವೇ ಆರಂಭವಾಯಿತು. ಈ ಅನುಭವ ಮಂಟಪದ ಮುಖಾಂತರ ಪ್ರಜಾ ಪ್ರಭುತ್ವದ ಮೌಲ್ಯಗಳನ್ನು ಜಗತ್ತಿನಲ್ಲಿ ಪ್ರಪ್ರಥಮ ಬಾರಿಗೆ ಆಚರಣೆಯಲ್ಲಿ ತಂದ ಕೀರ್ತಿ ಬಸವಣ್ಣನವರಾಗಿದೆ. ಆ ಮೂಲಕ ಸಮಾಜದಲ್ಲಿ ಭಯ ಮೂಲಕ ಧರ್ಮವನ್ನು ಅಳಿಸಿ ಹಾಕಿ ಪ್ರೀತಿಯಿಂದ ಕೂಡಿದ ಧರ್ಮ (ದಯೆ) ಮೂಲದ ಧರ್ಮವನ್ನು ಪುನಃ ಸ್ಥಾಪಿಸಲಾಯಿತು. ಅಣ್ಣಬಸವಣ್ಣನವರ ಕಾಲಕ್ಕೆ ಈ ನಿಟ್ಟಿನಲ್ಲಿ ಬಸವಣ್ಣನವರ ಕಾಲ ಮತ್ತು ವಂಶ ಕುರಿತು ಒಂದು ಐತಿಹಾಸಿಕ ಸಮೀಕ್ಷೆಯೇ ಈ ಲೇಖನ.

ರಾಷ್ಟ್ರ ಚರಿತ್ರೆ ಅಥವಾ ವ್ಯಕ್ತಿ ಚರಿತ್ರೆಯ ಕ್ರಮಬದ್ದ ಅಧ್ಯಯನಕ್ಕೆ ಮೂಲಾಧಾರಗಳು ಅತಿ ಅವಶ್ಯಕವಾಗಿವೆ. ಅದರಲ್ಲಿ ಇತಿಹಾಸ ರಚನೆಯಲ್ಲಿ ಜೀವನ ಚರಿತ್ರೆ ವಂಶಾವಳಿಗಳ ವಿವರಣೆ ನೀಡುವಂತಹ ಸಂದರ್ಭಗಳಲ್ಲಿ ಶಾಸನಗಳು ಬಹಳ ಪ್ರಮುಖವಾದ ಪಾತ್ರವಲ್ಲದೆ ದಾಖಲೆಯಾಗುತ್ತದೆ. ಈ ದೃಷ್ಟಿಯಿಂದ ಬಸವಣ್ಣನವರ ಮೂಲ ವಂಶವನ್ನು ಶಾಸನಗಳ ಪ್ರಕಾರ ತಿಳಿಸುವ ಒಂದು ಕಿರು ಪ್ರಯತ್ನ ಮಾಡುತ್ತಿರುವೆ. ಏಕೆಂದರೆ ಇತಿಹಾಸದ ಜೀವಾಳವೇ ಆಧಾರಗಳು. ಆಕರಗಳು. ಇವು ಇರಿಹಾಸವೆಂಬ ಭವ್ಯ ಸೌಧ ನಿರ್ಮಾಣದ ಕಚ್ಚಾ ಸಾಮಗ್ರಿಗಳನ್ನು ಬಳಸಿಕೊಂಡು ವಸ್ತು ನಿಷ್ಠೆ ಚರಿತ್ರೆ ರಚನೆಗೆ ಸಹಾಯಕಾರಿಯಾಗಿದೆ.

1]ಬಸವಣ್ಣನವರ ಕುರಿತು ಮಾಹಿತಿ ನೀಡುವ ಪ್ರಮುಖ ಶಾಸನಗಳು

1] ಕ್ರಿ.ಶ 1259 ರ ಹಿರಿಯೂರ ಶಾಸನ ಕೃತರು - ಬಸವಯ್ಯಾ
2] ಕ್ರಿ.ಶ. 1260 ರ ಅರ್ಜುನವಾಡಶಾಸನ - ಬಸವರಾಜ ಸಂಗನಬಸವ
3] ಕ್ರಿ.ಶ 1263ರ ಚೌಡನದಾನ ಪುರಾಣದ 2 ಶಾಸನಗಳು ಸಂಗಮೇಶನ ಪುತ್ರ ಬಸವಯ್ಯ ಸಂಗನಬಸವ
4] ಕ್ರಿ.ಶ 1279 ರ ಕಲೆದೇವರಪುರದ ಶಾನದಲ್ಲಿಯ ಸವರಾಜ ಸಂಗನಬಸವಯ್ಯ
5] ಕ್ರಿ.ಶ 1228 ರ ಮಂಡಿಪುರದ ಶಾಸನ
6] ಕ್ರಿ.ಶ 14ನೇ ಶತಮಾನದ ಗುಡಿಹಾಳ ಶಾಸನ
7] ಕ್ರಿ.ಶ 1680 ರ ರ ಜೋಡಿದಾಸೇನ ಹಳ್ಳಿ ಶಾಸನ
8] ಕ್ರಿ.ಶ 1259 ರ ಆನಂದಪುರ ಮಠದ ತಾಮ್ರ ಶಾಸನ
9] ಕ್ರಿ.ಶ 1700 ರ ಕಾನರಾನಹಳ್ಳಿಯ 2 ತಾಮ್ರ ಶಾಸನ

ಈ ಎಲ್ಲ ಶಾಸನಗಳಲ್ಲಿ ಬಸವಣ್ಣನವರ ವಿವಿಧ ಹೆಸರುಗಳನ್ನು ಕಾಣಬಹುದಾಗಿದೆ.

ಬ] ಇತಿಹಾಸ ದೃಷ್ಠಿಯಿಂದ ಬಸವಣ್ಣನ ಮೂಲ ಪುರುಷರು

ಪುರಾಣಗಳು ಬಸವಣ್ಣನವರ ತಂದೆ ಮಂಡಗೆ ಮಾದಿರಾಜ ಎಂದು ಕರೆದಿವೆ ಇಲ್ಲಿ ಮಂಡಿಗೆ ಎಂದರೆ ಅವರ ಗ್ರಾಮದ ಹೆಸರಾಗಿದ್ದ, ವಚನಕಾರ ಪಟ್ಟವಾಳಯ್ಯನ ವಚನದಲ್ಲಿ ಬರುವಂತೆ –

ಕರವೂರ ನಿರಹಂಕಾರ ಸಚನಿದೇವಿಯರ
ಬಸುರಲ್ಲಿ ಬಂದರೆನ್ನಬಹುದೆ ಪ್ರಭುದೇವರ
ಮಂಡಗೆಯ ಮಾದಿರಾಜ ಮಾದೆಲಾಂಬಿಕೆಯವಮ್ಮನವರ
ಬಸುರಲ್ಲಿ ಬಂದರೆನ್ನಬಹುದೆ ಬಸವೇಶ್ವರನು?
ಮೂರಡಿಯ ಮುದ್ದುಗೌಡ ಸುಗ್ಗವ್ವೆಯರ ಬಸುರಲ್ಲಿ
ಬಂದರೆನ್ನಬಹುದೇ ಸಿದ್ದರಾಮೇಶ್ವರನ.

ಈ ವಚನದಲ್ಲಿ ಪ್ರಭುದೇವರ ತಾಯಿ ನಿರಹಂಕಾರ ಸುಜ್ಞಾನಿದೇ ಎಂದು ಸಿದ್ದರಾಮರ ತಂದೆ ತಾಯಿ ಮುದ್ದುಗೌರ ಸುಗ್ಗವ್ವೆ ಎಂದು ಹಾಗೂ ಬಸವಣ್ಣನವರ ತಂದೆ ತಾಯಿ ಕುರಿತು ಮಾದಿರಾಜ ಮತ್ತು ಮಾದಲಾಂಬಿಕೆ

ಹಾಗೂ ಅವರ ಊರಾದ ಮಂಡಗೆ ಎಂಬುದು ಈ ವಚನದಿಂದ ತಿಳಿದು ಬರುತ್ತದೆ. ಅದರಂತೆ ಅರ್ಜುನವಾಡ ಶಾಸನದಲ್ಲಿ " ವುತ್ತಂ ತರ್ದ್ದವಾಡಿ ಮಧ್ಯೆ ಗ್ರಾಮ ಭಾಗವಾಡಿ ಪುರವರಾದೀಶ್ವರ ಮಾದಿರಾಜನ ತನೂಜಂ ಬಸವರಾಜನ ಮಹಿಮೆಯಂತೆಂದಡೆ ಎಂಬ ಸಲುಗಳು ಅವರ ತಂದೆ ಗ್ರಾಮ ಹಾಗೂ ಜನ್ಮಸ್ಥಳ ಕುರಿತು ವಿವರಣೆ ನೀಡುತ್ತದೆ. ಅಲ್ಲದೆ ಅವರ ವಂಶಾವಳಿ ಕುರಿತು ಮಾಹಿತಿ ಒದಗಿಸುತ್ತದೆ.

ಹಲವಾರು ಸಾಹಿತಿಗಳು ಶಾಸನಶಾಸ್ತ್ರಜ್ಞರು ದೀರ್ಘವಾದ ಅಧ್ಯಯನದ ನಂತರ ಬಸವಣ್ಣನವರ ವಂಶಾವಳಿಯನ್ನು ಈ ರೀತಿಯಾಗಿ ಎಂ. ಕಲಬುರ್ಗಿಯವರು ನಿರ್ಮಿಸಿದ್ದಾರೆ.

ಮಾದಿರಾಜ

---

ಕಾವರಸಶಿಷ್ಯ ದೇವರಾಜ ಮಗ ಸಂಗನಬಸವ

।

ಕಲಿದೇವರಸ

।

ಹಾಲಸಬಸವಿದೇವ

ಈ ಅರ್ಜುನವಾಡ ಶಾಸನದಲ್ಲಿಯ ಕಂದಪದ್ಯದ ಪ್ರಕಾರ

ಸಂಗನ ಬಸವನ ಅಗ್ರ (ಜ)

(ಲಿಂ) ಗೈಕಂ ದೇವರಾಜ ಮುನಿಪನ ತನಯಂ

ಜಂಗಮ ಪರುಸಂ (ಕಾವ) ರ

ಸಂಗಂ ಪ್ರಿಯಸುತನೆನಿಪ್ಪ ಕಲಿದೇವರ ಸಂ ಎಂಬ ವಿವರದಲ್ಲಿ ಬಸವಣ್ಣನವರಿಗೆ ಒಬ್ಬ ಅಣ್ಣ ಇದ್ದನೆಂದು ಆತನ ಹೆಸರು ದೇವರಾಜ ಎಂದು ಆತನ ಮಗ ಕಲಿದೇವ ಹಾಗೂ ಹಾಲಬಸವದೇವರ ಉಲ್ಲೇಖ ಮೊದಲ ಬಾರಿಗೆ ಬೆಳಕಿಗೆ ಬಂದದ್ದು. ಈ ಶಾಸನದಿಂದಲೇ ಎಂಬುದನ್ನು ಮರೆಮಾಚುವಂತಿಲ್ಲ ಈ ದೃಷ್ಟಿಯಿಂದ ಇದು ಬಸವಣ್ಣನವರ ಕುರಿತು ಪ್ರಾಮುಖ್ಯ ದಾಖಲೆಯಾಗಿದೆ.

**ಬಸವಣ್ಣನವರು ಸವೇಸಿದ ಶಿವಜೀವನದ ಅಮೃತ ಘಳಿಗೆ:**

ಬಸವಣ್ಣನವರ ಜೀವಿತಕಾಲ ಶಾಸನಗಳ ಅನುಸಾರವಾಗಿ ಹೇಳುವುದು ಕಠಿಣವಾಗಿದ್ದರು. ಕೂಡ ಬಸವಣ್ಣನವರ ಸಮಕಾಲಿನರಾದ ಮಲ್ಲಿಕಾರ್ಜುನ ಪಂಡಿರತಾಧ್ಯರ ಬದುಕನ್ನು ಉಲ್ಲೇಖಿಸುವ ತೆಲಗು ಶಾಸನ ಕ್ರಿ.ಶ. 1185 ರಲ್ಲಿ ಆಂದ್ರದಲ್ಲಿ ದೊರೆತಿದೆ. ತೆಲಂಗಾಣ ಪ್ರಾಂತದ ಸಂಗಮೇಶ್ವರದ ಶಾಸನದಲಿಯ ಉಲ್ಲೇಖದ ಖಿಸುವ ತೆಲಗು ಶಾಸನ ಕ್ರಿ.ಶ. 1185 ರಲ್ಲಿ ಆಂದ್ರದಲ್ಲಿ ದೊರೆತಿದೆ. ತೆಲಂಗಾಣ ಪ್ರಾಂತದ ಸಂಗಮೇಶ್ವರದ ಶಾಸನದಲಿಯ ಉಲ್ಲೇಖದ ಪ್ರಕಾರ ಕ್ರಿ.ಶ 1187ರಲ್ಲಿ ಪಂಡಿತರಾಧ್ಯರು ಐಕ್ಯರಾದರು. ಎಂದು ತಿಳಿದು ಬರುತ್ತದೆ. ಹಾಗೂ ಅಲ್ಲಿಯೇ ಸಂಗಮೇಶ್ವರದ ಪಕ್ಕದಲ್ಲಿ ಸ್ಪಷ್ಟಪಡಿಸುತ್ತದೆ. ಅದ್ದರಿಂದ ಬಸವಣ್ಣನವರು ಕ್ರಿ.ಶ. 1185– 86 ವರೆಗೆ ಬದುಕಿದರೆಂದು ತಿಳಿದು ಬರುತ್ತದೆ.

ಅಭಿಪ್ರಾಯ ಸಮಾರೋಪ : ಶಾಸನಗಳ ಅನುಸಾರವಾಗಿ ಅಣ್ಣ ಬಸವಣ್ಣವರ ಹೆಸರು ವಂಶ ವಂಶಾವಳಿ ಜೀವಿತ ಕಾಲ ಕುರಿತು ಬಹುವಿರಳವಾದ ದಾಖಲೆಗಳು ಲಭ್ಯವಿದ್ದರು. ಅವರ ಸಮಕಾಲಿನರಾಗಿರುವ ಹಾಗೂ ಕಲ್ಯಾಣ ಕ್ರಾಂತಿಯಲ್ಲಿ ಮಹತ್ತರ ಪಾತ್ರವಹಿಸಿದ ಹಾಗೂ ಬಿಜ್ಜಳನನ್ನು ಕೊಂದ ಮೊಲ್ಲೆಬೊಮ್ಮಯನು ಕ್ರಿ.ಶ 1186 ರ ಕಲ್ಲೂರ ಶಾಸನದಲ್ಲಿ ಉಲ್ಲೇಖಿತನಾಗಿರುವುದರಿಂದ ಕ್ರಿ.ಶ 1186 ರ ವರೆಗೆ ಜೀವಿಸಿರಬೇಕೆಂದು ತಿಳಿದು ಬರುತ್ತದೆ. ಆದರೂ ನಿಖರವಾಗಿ ಇಂತಹ ದಿವಸ ಅವರ ಐಕ್ಯದಿವಸವೆಂದು ಹೇಳುವಂಥಹ ದಾಖಲೆಗಳು ಸಿಕ್ಕದೆ ಇರುವ ಕಾರಣ ಅವರ

ಈ ವಿವರಗಳಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಇನ್ನೂ ಸಂಶೋಧನೆ ಅವಶ್ಯಕವಿದೆ ಎಂದು ನನ್ನ ಅಭಿಪ್ರಾಯವಾಗಿದೆ.

ಆಕರ ಗ್ರಂಥಗಳು

1. ಯುಗದ ಬೆಳಗು ( ಬಸವ ಜಯಂತಿ ಸ್ಮರಣ ಸಂಚಿಕೆ 2015
ಪ್ರಕಾಶಕರು. ಬಸವಜಯಂತಿ ಉತ್ಸವ ಸಮಿತಿ ಬೀದರ.
2. ಶಾಸನಗಲ್ಲಿ ಬಸವಣ್ಣನವರ ಕಾಲ ಮತ್ತು ಇತಿವೃತ್ತ ಸಮೀಕ್ಷೆ ಡಾ॥ ಸಿ.ನಾಗಭೂಷಣ
3. ಸಮಗ್ರ ಕರ್ನಾಟಕದ ಇತಿಹಾಸ ಕೆ.ಎಸ್. ಅಶ್ವಸ್ಥಪ್ಪ
4. History and culture of Karnataka By K.R.Basavaraj

**ISSN 2454-7255** **Original Article** **VOL 5|ISSUE 2|Mar-2015**
Shodha International Recognition
Multi Disciplinary Research Journal
ISSN 2454-7255
Volume-5 | Issue-2 | March-2015
Available online at www.godutaidegree.org

## ಕರ್ನಾಟಕದಲ್ಲಿ 'ರಂಗ ಸಂಗೀತದ ಮೂಲಕ ಹಿಂದೂಸ್ಥಾನಿ ಸಂಗೀತ'

**ಲಕ್ಷ್ಮೀಶಂಕರ ಜೋಶಿ,**
M.A.(Music), MA(Kannada), (Ph.D)
ಸಹಾಯಕ ಪ್ರಾಧ್ಯಾಪಕಿ, ಸಂಗೀತ ವಿಭಾಗ
ಎನ್.ವಿ.ಡಿಗ್ರಿ ಕಾಲೇಜು, ಕಲಬುರಗಿ

ರಂಗಭೂಮಿ ಅವಿಷ್ಕಾರವಾದಾಗಿನಿಂದ ಅದರ ಇತಿಹಾಸವನ್ನು ಅನೇಕ ಲೇಖಕರು ಬರೆದಿದ್ದಾರೆ. ಆದರೆ ರಂಗ ಸಂಗೀತದ ಕುರಿತು ಬರೆದವರು ತೀರಾ ಕಡಿಮೆ. ಕರ್ನಾಟಕದಲ್ಲಿ ಹಿಂದೂಸ್ಥಾನೀ ಸಂಗೀತ ನೆಲೆಗೊಳ್ಳಲು ಮೂಲ ಸಾಧನವಾಗಿ ಉಪಯೋಗಿಸಲ್ಪಡುತ್ತಿದ್ದ ರಂಗ ಸಂಗೀತ ಇತ್ತೀಚಿನ ದಿನಗಳಲ್ಲಿ ತೆರೆಮರೆಗೆ ಸೇರುತ್ತಲಿದೆ. ಹಿಂದುಸ್ತಾನೀ ಸಂಗೀತದ

ಪ್ರಮುಖ ಅಂಗವಾಗಿ ಬೆಳೆದ ನಾಟ್ಯ ಸಂಗೀತವು ನೆರೆಯ ಪ್ರಾಂತವಾದ ಮಹಾರಾಷ್ಟ್ರದಲ್ಲಿ ಉಚ್ಛ್ರಾಯ ಸ್ಥಾನದಲ್ಲಿದ್ದು, ಕರ್ನಾಟಕದಲ್ಲಿ ಮಾತ್ರ ಅದು ತೀರಾ ಅಸಡ್ಡೆಗೆ ಒಳಗಾಗಿದ್ದು ವಿಪರ್ಯಾಸವೇ ಸರಿ!.

ಆಧುನಿಕ ರಂಗಭೂಮಿಯ ಮಹತ್ವದ ಅವಿಷ್ಕಾರವೆಂದರೆ 'ರಂಗ ಸಂಗೀತ' ಅನುಕರಣ ಹಾಗೂ ಪ್ರದರ್ಶಕ ಕಲೆಯಾಗಿದೆ. ಸಂಗೀತವೂ ಕೂಡ ಕಾಲ ದೇಶಕ್ಕನುಗುಣವಾಗಿ ವಿವಿಧ ರೀತಿಯಲ್ಲಿ ಬಳಕೆಯಾಗುತ್ತ ಬಂದಿದೆ. ರಂಗ ಪ್ರದರ್ಶನದಲ್ಲಿ ಸಂಗೀತ ಸೇರಿದಾಗ ಅದಕ್ಕೆ ಸ್ವತಂತ್ರ ಅಸ್ತಿತ್ವ ಇರುವುದಿಲ್ಲ. ರಂಗಭೂಮಿಯ ಸಂಗೀತದ ಬಳಕೆ ಕುರಿತು ಖ್ಯಾತ ಕವಿ ಡಿ.ವಿ.ಜಿ. ಹೀಗೆ ಹೇಳಿದ್ದಾರೆ. "ಮನುಷ್ಯನ ಹೃದಯ ಭಾಗಗಳ ಪರಿಪೂರ್ಣವಾದ ಅಭಿವ್ಯಕ್ತಿಗೆ ಮೂರು ಲಲಿತ ಕಲೆಗಳ ಸಮ್ಮಿಲನ ಅವಶ್ಯವಾಗಿದೆ. ೧) ಕಾವ್ಯ ೨) ಸಂಗೀತ ೩) ಅಭಿನಯ. ಸಂಗೀತವಿಲ್ಲದಿದ್ದರೆ ಸಾಮಾನ್ಯ ಜನರ ಹೃದಯಕ್ಕೆ ತೀವ್ರತೆ ಬರಲಾರದು. ಹೃದಯದ ಚಟುವಟಿಕೆಗೆ ತಕ್ಕ ವಾತಾವರಣ ಸೃಷ್ಟಿಸುವ ಶಕ್ತಿ ಸಂಗೀತಕ್ಕೆ ಸೇರಿದ್ದು. ಸಂಗೀತವು ರಂಗಭೂಮಿಯ ಜೀವಾಳವಾಗಿದೆ.

"ಇಪ್ಪತ್ತನೇ ಶತಮಾನದ ಆರಂಭದಲ್ಲಿ ಅಂದರೆ ೧೯೧೬ ರ ಮೊದಲು ಉತ್ತರ ಕರ್ನಾಟಕದಲ್ಲಿ ಕರ್ನಾಟಕಿ ಪದ್ಧಿತಿಯ ಸಂಗೀತವಿತ್ತು. ಕ್ರಮೇಣ ಹಿಂದೂಸ್ತಾನೀ ಸಂಗೀತವನ್ನು ರೂಢಿಯಲ್ಲಿ ತಂದ ಕೀರ್ತಿ ಹಲವಾರು ಧೀಮಂತ ಗಾಯಕರಿಗೆ ಸಲ್ಲಬೇಕು. ಇದರಲ್ಲಿ ಮುಖ್ಯವಾಗಿ ಪಂ. ಭಾಸ್ಕರಬುವಾ ಬಖಲೆ, ನತ್ಥಿನಖಾನ, ರೆಹಮತ ಖಾನ, ಅಬ್ದುಲ್ ಕರೀಂಖಾನ, ಸವಾಯಿ ಗಂಧರ್ವ ಮುಂತಾದವರನ್ನು ನೆನಯಬೇಕು.

ಶಾಸ್ತ್ರೀಯ ಸಂಗೀತ ರಂಗಭೂಮಿಯ ಸೆಲೆ ಹಾಗೂ ನೆಲೆ. ಶಾಸ್ತ್ರೀಯ ಸಂಗೀತವನ್ನು ಆಧರಿಸಿದ ರಂಗ ಸಂಗೀತ ಸರ್ವರ ಸಹಾನುಭೂತಿಗಳಿಸಿ ಭಾವ ಪ್ರಪಂಚಕ್ಕೆ ಕೊಂಡೊಯ್ದು ಜನಮನದಲ್ಲಿ ದಾಖಲಾಯಿತು. ರಂಗಭೂಮಿ ರಸಿಕರ ರಂಜನೀಯ ತಾಣವಾಯಿತು. ರಂಗಸಂಗೀತವು ಕಲಾವಿದರಿಗೆ ಸಾಧನೆಯ ಕಣವಾಯಿತು.

೧೮೯೮ ರಲ್ಲಿ ಪ್ರಾರಂಭವಾದ ಸಕ್ರಿ ಬಾಳಾಚಾರ್ಯರ ನಾಟಕ ಕಂಪನಿ ಸಾಕಷ್ಟು ಬೆಳೆಯಲಿಲ್ಲ. ಅದೇ ಸಮಯದಲ್ಲಿ ಕೊಣ್ಣೂರ ಶಿವಮೂರ್ತಿ ಸ್ವಾಮಿಗಳ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ ಹಾಡಿದ ಹಾಡುಗಳು ಉಳಿಯಲಿಲ್ಲ. ಶಿರಹಟ್ಟಿ ವೆಂಕೋಬರಾಯರ ಮಹಾಲಕ್ಷ್ಮೀ ಪ್ರಾಸಾದಿತ ಸಂಗೀತ ನಾಟಕ ಮಂಡಳಿಯವರ ಹಾಡುಗಳು ಜನಪ್ರಿಯವಾದವು. ಅವರು ಅಭಿನಯಿಸಿದ ಕೃಷ್ಣಲೀಲಾ, ಭಕ್ತ ಪ್ರಹ್ಲಾದ, ರಾಮಾಯಣ ನಾಟಕದ ಹಾಡು ಜನಪ್ರಿಯವಾಗಿ ಎಲ್ಲರ ಬಾಯಲ್ಲಿ ಬಂದವು. ಇದಾದ ನಂತರ ಸಂಗೀತ ಶಾಸ್ತ್ರ ಬಲ್ಲ ಕಲಾವಿದರು ರಂಗಭೂಮಿಗೆ ಬಂದರು.

ರಂಗ ನಾಟಕಗಳಲ್ಲಿ ಎರಡು ಬಗೆಯ ಗಾಯಕಿಯರ ಪ್ರವೇಶವಾಯಿತು. ಅವರು ಸಂಪೂರ್ಣವಾಗಿ ಶಾಸ್ತ್ರೀಯ ಗಾಯನ ಬಲ್ಲವರಾಗಿರಬೇಕೆಂದು ಆ ಕಂಪನಿಯ ಮಾಲೀಕರು ಆಶಿಸುತ್ತಿದ್ದರು. ಗಾಯಕಿಯರು ಕೇವಲ ಹಾಡುಗಾರರಲ್ಲ. ನಟಿಯರೂ ಆಗಿದ್ದರೂ ಬೀಳಗಿ ಸೋದರಿಯರಾದ ಗೋಹರಜಾನ ಹಾಗೂ ಅಮೀರಬಾಯಿ–ಕರ್ನಾಟಕಿ ಇವರನ್ನು ರೂಪಿಸಿದ ಕನ್ನಡ ಮತ್ತು ಮರಾಠಿ ರಂಗ ಭೂಮಿಗಳು ಸಂಗೀತ ಪ್ರಧಾನವಾಗಿದ್ದವು. ಕನ್ನಡ ರಂಗಭೂಮಿಗೆ ಪ್ರೇರಣೆ ಮರಾಠಿ– ರಂಗಭೂಮಿಯಿಂದ ಸಿಕ್ಕಿತು ಎಂಬ ಜನಪ್ರಿಯ ಗ್ರಹಿಕೆಯಿದೆ. ಕೆಲಮಟ್ಟಿಗೆ ಇದು ನಿಜವಾದರೂ ಕೂಡ ರಂಗಭೂಮಿಯ ಚರಿತ್ರೆ ಅಗೆಯುತ್ತಾ ಹೋದರೆ ಕನ್ನಡ ರಂಗಭೂಮಿಯೇ ಮರಾಠಿ ರಂಗಭೂಮಿಯ ಸಂಗೀತಮಯತೆಗೆ ಪ್ರೇರಕವಾಗಿರುವ ವಿಚಿತ್ರ ಸತ್ಯ ತಿಳಿಯುತ್ತದೆ.

ಮರಾಠಿ ರಂಗಭೂಮಿಯಲ್ಲಿ ಅಣ್ಣಾಸಾಹೇಬ ಕಿರ್ಲೋಸ್ಕರ ಅವರ ಹೆಸರು ಅಜರಾಮರವಾಗಿದೆ. ಅವರು ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದರು. ಅವರು ಸ್ವತಃ ಹಾಡುತ್ತ ಆ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ಇವರು ಬೆಳಗಾವಿ ಜಿಲ್ಲೆಯ ಗುರ್ಲಹೊಸೂರ ಗ್ರಾಮದವರು.

ಮರಾಠಿ ಮತ್ತು ಕನ್ನಡ ರಂಗಭೂಮಿಯಲ್ಲಿ ಶತಮಾನಗಳಿಂದ ಪರಸ್ಪರ ವಿನಿಮಯ ನಡೆಯುತ್ತ ಬಂದಿದೆ ಎಂದು ಖ್ಯಾತ ವಿಮರ್ಶಕ ಜಿ.ಎಸ್.ಅಮೂರ ಹೇಳುತ್ತಾರೆ. "ಶ್ರೀ ಶೇಷಗಿರರಾವ ತುರಮರಿ ಮತ್ತು ಅಣ್ಣಾಸಾಹೇಬ ಕಿರ್ಲೋಸ್ಕರ ಅವರು ಸ್ನೇಹಿತರಾಗಿದ್ದರು.

೧೮೭೦ ರಲ್ಲಿ ತುರಮರಿಯವರ ನಾಟಕ 'ಶಾಕುಂತಲೆ' ಪ್ರಥಮ ಆವೃತ್ತಿ ಪ್ರಕಟವಾಯಿತು. ಅದಕ್ಕೆ ರಂಗರೂಪ ಕೊಟ್ಟ ನಂತರ ಯಾಕೋ ಅದಕ್ಕೆ ಖ್ಯಾತಿ ಬರಲಿಲ್ಲ. ಈ ಘಟನೆಯ ಎಂಟು ಹತ್ತು ವರುಷದ ನಂತರ ಕಿರ್ಲೋಸ್ಕರ ಅವರು ಮರಾಠಿಯಲ್ಲಿ ತುರಮರಿಯವರ 'ಶಾಕುಂತಲಾ' ನಾಟಕವನ್ನು ತರ್ಜುಮೆ ಮಾಡಿದರು. ಅದನ್ನು ಮರಾಠಿಯಲ್ಲಿ ರಂಗಕ್ಕೆ ಕೂಡಿಸಿದಾಗ ಅಣ್ಣಾರಾವ – ಕಿರ್ಲೋಸ್ಕರ ಅವರು ಜಗತ್ಪ್ರಸಿದ್ಧರಾದರು.

ಈ ನಾಟಕ ಇಷ್ಟು ಪ್ರಸಿದ್ಧವಾಯಯಿತೆಂದರೆ ಸುಸಂಸ್ಕೃತ, ಸುಶಿಕ್ಷಿತ ಜನರು ' ಶಾಕುಂತಲಾ' ನಾಟಕದ ಬಗ್ಗೆ ಚರ್ಚೆ ಮಾಡುವುದು, ಅಭಿಪ್ರಾಯ ತಿಳಿಸುವುದು ಒಂದು ಪ್ರತಿಷ್ಠೆಯ ವಿಷಯ ಅಂದುಕೊಂಡಿದ್ದರು. ಸಂಗೀತ ಸಭೆಗಳಲ್ಲಿ, ಉಲ್ಲಾಸ ಕೂಟಗಳಲ್ಲಿ ಶಾಕುಂತಲಾ ನಾಟಕದ ಹಾಡುಗಳನ್ನು ಕೇಳುವುದು ಸಾಮಾನ್ಯವಾಗಿತ್ತು. ಮುಂದೆ ಅಣ್ಣಾರಾವ ಅವರು ಹಲವಾರು ಕನ್ನಡ ರಂಗಭೂಮಿ ಹಾಡುಗಳನ್ನು ಮರಾಠಿಯಲ್ಲಿ ಅಳವಡಿಸಿಕೊಂಡರು. ಅದರ ಮೂಲ ಧಾಟಿ(ಚಾಲ) ಕನ್ನಡದ್ದೇ ಎಂಬುದು ಸುಳ್ಳಲ್ಲ.

ಉದಾ: ಬೆಳಗಾವಿ, ಧಾರವಾಡ, ಪ್ರಾಂತಗಳ ಅನೇಕ ವೀರಶೈವ ಮಠಗಳಲ್ಲಿ 'ಚಿಕ್ಕಮಕ್ಕಳೇ ಕೇಳಿರಯ್ಯ ನಿಮಗೆ ಅಕ್ಕರೆಯಿಂದಲಿ ಕೇಳುವೆನಯ್ಯ" ಎಂಬ ಗೀತೆಯನ್ನು ಕಲಿಸಲಾಗುತ್ತಿತ್ತು. ಈ ಹಾಡಿನ ಧಾಟಿಯನ್ನು ಕೂಡ ಅಣ್ಣಾರಾವ ಕಿಲೋಸ್ಕರ ಅವರೇ ತಮ್ಮ 'ಸೌಭದ್ರ' ನಾಟಕದಲ್ಲಿ 'ಅರ ಸಿಖಾ ರತಿ ಹಾ ಶೇವಾ' ಎಂಬ ಹಾಡಿಗೆ ಧಾಟಿ ಹಾಕಿ ಅಳವಡಿಸಿಕೊಂಡರು.

ನಾಟಕಗಳಲ್ಲಿ ಈ ಸಂಗೀತಮಯತೆ ಎರಡು ಕಾರಣಗಳಿಂದ ಅನಿವಾರ್ಯವಾಗಿತ್ತು. ಮೊದಲನೆಯದಾಗಿ ನಾಟಕದ ಸೆಟ್ ಬದಲಾವಣೆಗೆ ಬೇಕಾಗಿದ್ದ ೧೦–೧೫ ನಿಮಿಷ ಸಮಯವನ್ನು ತುಂಬಲು, ಎರಡನೆಯದಾಗಿ ಸಂಗೀತ ಕೇಳಲೆಂದೇ ನಾಟಕಕ್ಕೆ ಬರುತ್ತಿದ್ದ ಪ್ರೇಕ್ಷಕರನ್ನು ತಣಿಸಲು. ಮೊದಲನೆಯದು ತಾಂತ್ರಿಕ ಕಾರಣವಾದರೆ– ಎರಡನೆಯದು ಸಾಂಸ್ಕೃತಿಕ ಕಾರಣ. ಎರಡನೇ ಕಾರಣವನ್ನು ವಿದ್ವಾಂಸರು ಈ ರೀತಿ ಗುರುತಿಸಿದ್ದಾರೆ.

ಏಣಗಿ ಬಾಳಪ್ಪ ಹೇಳುತ್ತಾರೆ.

"ಗವಾಯಿಗಳ ಸಂಗೀತ ಕೇಳಬೇಕೆಂದರೆ ಆಗ ಸಹಜವಾಗಿ ಸಿಗುತ್ತಿರಲಿಲ್ಲ. ಗೌಡ್ರು ಮನೆತನದವರು, ಸಾಹುಕಾರರು, ಸಂಗೀತ ಏರ್ಪಡಿಸುತ್ತಿದ್ದರು. ಸಾಮಾನ್ಯ ಮಂದಿಗೆ ಸಂಗೀತ ಕೇಳಾಕ ಸಿಗುತ್ತಿರಲಿಲ್ಲ. ಸಂಗೀತ ಕೇಳಾಕ ಸಾಮಾನ್ಯರು ನಾಟಕ ನೋಡಾಕ ಹೋಗ್ತಿದ್ರು. ಸಂಗೀತ ಕೇಳಿ ತೃಪ್ತಿ ಪಡುತ್ತಿದ್ದರು.

ಆದರೆ ಈ ಸಂಗೀತ ಕೇಳುವುದು ಒಮ್ಮೊಮ್ಮೆ ಅತಿರೇಕಕ್ಕೂ ಹೋಗುತ್ತಿತ್ತು. ಹಾಡು ಸಹಿತ ಅತಿಯಾಗಿ ಆ ನಾಟಕಗಳಲ್ಲಿ ಸೇರ್ಪಡೆ ಮಾಡುತ್ತಿದ್ದರು.

ಡಾ. ಬಸವರಾಜ ಜಗಜಂಪಿಯವರು ಹೇಳುತ್ತಾರೆ.

ನಾಟಕದ ದೃಶ್ಯದಲ್ಲಿ ಒಬ್ಬ ಬ್ರಾಹ್ಮಣನ ಪ್ರವೇಶವಾಯಿತು ಎಂದಾಗ, ಅಲ್ಲಿದ್ದ ಸೇವಕ ರಾಜನಿಗೆ ಹೇಳುತ್ತಾನೆ. "ಪ್ರಭು ತಮ್ಮ ದರ್ಶನಕ್ಕಾಗಿ ಈ ಬ್ರಾಹ್ಮಣ ಬಂದಿದ್ದಾನೆ" ಎಂದಾಗ ಅಲ್ಲಿ ಒಂದು ಹಾಡು ನಂತರ ರಾಜನ ಉತ್ತರ ಬಂದಾಗ ಅಲ್ಲಿ ಒಂದು ಹಾಡು, ಬ್ರಾಹ್ಮಣನನ್ನು ಸಭೆಗೆ ಕರೆಸಲು ಅಲ್ಲಿ ಒಂದು ಹಾಡು, ಬರುವಾಗ ಹಾಡು, ಹೋಗುವಾಗ ಹಾಡು, ಊಟ ಮಾಡುವಾಗ ಹಾಡು, ಆಜ್ಞೆ ಕೊಡುವಾಗ ಹಾಡು, ಆಜ್ಞೆ ಪಾಲಿಸುವಾಗ ಹಾಡು. ಒಂದು ವೇಳೆ ಪಾತ್ರ ಸಾಯುವ ಸಂದರ್ಭ ಬಂದಾಗ ಆ ಪಾತ್ರ ಹಾಡಿಯೇ ಸಾಯಬೇಕು. ಆ ಹಾಡು ಪ್ರೇಕ್ಷಕರಿಗೆ ಇಷ್ಟವಾಯಿತೋ ಒನ್ಸ್ ಮೋರ ಹೇಳಿದಾಗ ಸತ್ತ ಪಾತ್ರವನ್ನು ಎಬ್ಬಿಸಿ ಹಾಡಿಸಿ ಮತ್ತೆ ಸಾಯುವಂತೆ ಮಾಡುತ್ತಿದ್ದರು. ಇಂಥ ಅಭಾಸಗಳು ನಡದೇ ನಡೆಯುತ್ತಿದ್ದವು.

ಎನ್ಕೆಯವರು ಹೇಳುವ ಪ್ರಸಂಗ ಬಲೇ ಮಜವಾಗಿದೆ.

ಗಂಗೂಬಾಯಿ ಗುಳೇದ ಗುಡ್ಡ ಅವರು ನಾಟಕದಲ್ಲಿ 'ನಾ ಪೋಗಿ ಬರ್ಪೆ ನಾರಿಯರೆ ಬೇಡುವೇನಾಜ್ಞೆಯ' ಎಂಬ ಭೈರವಿ ರಾಗದ ಮನಸೂರೆಗೊಳ್ಳುವ ಗೀತೆಯನ್ನು ಹೇಳಿ ಬಲಗಡೆ ವಾಲಿ, ತಿಹಾಯ್ ಮಾಡಬೇಕೆಂದು ವಾದ್ಯಗಾರರಿಗೆ ಸೂಚನೆ ಕೊಟ್ಟು ನಿಷ್ಕ್ರಮಿಸತೊಡಗಿದಾಗ ಆಕೆಯನ್ನು ಜನ ನಿಷ್ಕ್ರಮಿಸಲು ಬಿಟ್ಟಾರೇಯೇ? ಸೈಡ ವಿಂಗಿನವರೆಗೆ ಹೋದವಳು ಮತ್ತೆ ಬಂದು ಅದೇ ತಾನಗಳನ್ನು ತುಳುಕಾಡಿಸಬೇಕು. ಮತ್ತೆ ಮಿಂಚಿನವೇಗದಿಂದ ನಿಷ್ಕ್ರಮಿಸಿತೊಡಗಿದರೆ ಜನ ಜಂಗುಳಿ ಸುಮ್ಮನಿದ್ದಾರೆಯೇ? ಮಹಾನಂದೆ ಪುನಃ ಪ್ರವೇಶಿಸುವವರೆಗೂ ಒನ್ಸ್ ಮೋರಗಳು, ಚಪ್ಪಾಳೆಗಳು ನಿಲ್ಲುವ ಹಾಗೇ ಇಲ್ಲ.

ಆದರೆ ಗರುಡ ಸದಾಶಿವರಾಯರಿಗೆ ನಾಟಕವನ್ನು ಅತಿ ಸಂಗೀತಮಯ ಮಾಡುವದು ಇಚ್ಛೆ ಇರಲಿಲ್ಲ. ನಟರು ಅಗತ್ಯಕ್ಕಿಂತ ಹೆಚ್ಚಿಗೆ ಹಾಡತೊಡಗಿದರೆ ಸೀಟಿ ಊದಿ ನಿಲ್ಲಿಸುವ ಪದ್ಧತಿಯನ್ನು ಜಾರಿಯಲ್ಲಿಟ್ಟಿದ್ದರು.

ಒಮ್ಮೆ ನೀಲಕಂಠಬುವಾ ಹಾಡುವಾಗ ಮೂಡ ಬಂದು ಒಟ್ಟು ಹಾಡು ನಿಲ್ಲಸಲೇ ಇಲ್ಲ. ಸೀಟಿ ಊದಿದರೂ ಊಹೂಂ ಹಾಡು ನಿಲ್ಲಲಿಲ್ಲ. ಪರದೆ ಜಗ್ಗಿದರೂ ಪರದೆ ಸರಿಸಿ ಮುಂದೆ ಬಂದು ಹಾಡತೊಡಗಿದರು. ಮತ್ತೊಂದು ಪರದೆ ಬಿಟ್ಟರು. ಅದನ್ನು ಸರಿಸಿ ಪ್ರೇಕ್ಷಕರ ಮುಂದೆ ಬಂದು ಹಾಡತೊಡಗಿದರಂತೆ. ಆಗ ಗರುಡರು ಅಸಹಾಯಕರಾಗಿ ಹಾಡಲು ಬಿಟ್ಟರಂತೆ.

ಬರ ಬರುತ್ತ ರಂಗಭೂಮಿಗೂ ಸಂಗೀತಕ್ಕೂ ಇದ್ದ ನಂಟು ಕ್ಷೀಣಿಸತೊಡಗಿತು. ಇದಕ್ಕೆ ಕಾರಣ ಗ್ರಾಮಫೋನಗಳು, ರೇಡಿಯೋಗಳು, ರಂಗಭೂಮಿಯಲ್ಲಿದ್ದ ಸಂಗೀತಗಾರರು ಸಿನಿಮಾ ಸಂಗೀತ ನಿರ್ದೇಶಕರಾಗಿ ರೂಪಾಂತರಗೊಂಡಿದ್ದು, ರಂಗಭೂಮಿಯಿಂದ ಹೊರಬಂದ ಸಂಗೀತಗಾರರು ಸ್ವತಂತ್ರವಾಗಿ, ಶಾಸ್ತ್ರೀಯ ಕಲಾವಿದರಾಗಿ ರೂಪುಗೊಂಡಿದ್ದು, ಸವಾಯಿ ಗಂಧರ್ವ, ಬಾಲಗಂಧರ್ವ ಮಲ್ಲಿಕಾರ್ಜುನ ಮನ್ಸೂರ, ಹೀರಾಬಾಯಿ ಬಡೋದೇಕರ ಈ ಮಟ್ಟದ ಪ್ರತಿಭೆಗಳು ರಂಗಭೂಮಿಯಲ್ಲಿ ತೊಗಡಿಕೊಳ್ಳದೇ ಹೋದದ್ದು_ ಇತ್ಯಾದಿ.

ಮೇಲ್ಕಾಣಿಸಿದ ಪ್ರಸಂಗಗಳು ಹಿಂದುಸ್ತಾನೀ ಸಂಗೀತ ಹಾಗೂ ರಂಗ ಸಂಗೀತಗಳ ನಡುವಿದ್ದ ಆಪ್ತ ಒಡನಾಟದ ಪುರಾವೆಗಳಾಗಿವೆ. ಏನೇ ಇರಲಿ ಹಿಂದುಸ್ತಾನೀ ಸಂಗೀತ ರಂಗ ಸಂಗೀತದ ಮೂಲಕವೂ ಕೂಡ ಸಾಕಷ್ಟು ಬೆಳೆಯಿತು.

ಆ ಕಾಲದಲ್ಲಿ ರಂಗ ಸಂಗೀತ ಉಚ್ಚ್ರಾಯಮಟ್ಟ ತಲುಪಿತ್ತು. ಮನೆ ಮನೆಯಲ್ಲಿ ಸಂಗೀತದ ಗುಂಗು ಹಿಡಿಸಿದ್ದಂತೂ ಸುಳ್ಳಲ್ಲ ಅಲ್ಲವೇ.

**ಗ್ರಂಥ ಋಣ:**


೧. ಎನ್ಕೆ– ಉತ್ತರ ಕರ್ನಾಟಕದ ರಂಗಭೂಮಿ.

೨. ಅಮೀರಬಾಯಿ ಕರ್ನಾಟಕಿ, ಲೇ : ಡಾ.ರಹಮತ ತರೀಕರೆ

೩. ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ, ಲೇ: ಡಾ. ರಾಮಕೃಷ್ಣ ಮರಾಠೆ

೪. ನಾದಲೋಕದ ರಸ ನಿಮಿಷಗಳು. ಲೇ : ಶಿರೀಷ ಜೋಶಿ